

ಗಣಪತಿ ದೇವಾಲಯ 30ನೇ ವರ್ಷದ ಉತ್ಸವ

ಬಾಳೆಹೊನ್ನೂರು: ಪಟ್ಟಣದ ಜೇಸಿ ವೃತ್ತದ ಬಳಿಯಿರುವ ಗಣಪತಿ ದೇವಸ್ಥಾನದ 30ನೇ ವರ್ಷದ ವಾರ್ಷಿಕೋತ್ಸವ ಮಂಗಳವಾರ ಶ್ರದ್ಧಾ ಭಕ್ತಿಯಿಂದ ನಡೆಯಿತು. ವಾರ್ಷಿಕ ಪೂಜೆ ಅಂಗವಾಗಿ ಗುರು ಪ್ರಾರ್ಥನೆ, ಗಣಪತಿ ಪೂಜೆ, ಪುಣ್ಯಾಹ, ಪಂಚಾಮೃತಾಭಿಷೇಕ, ಅಥರ್ವಶೀರ್ಷಾಭಿಷೇಕ, ಪುಷ್ಪಾಲಂಕಾರ, ಅಷ್ಟದ್ರವ್ಯ ಗಣಪತಿ ಹೋಮ, ನಾಗದೇವರಿಗೆ ಪೂಜೆ, ನವಗ್ರಹ ಪೂಜೆ, ಸಾಮೂಹಿಕ ಸತ್ಯನಾರಾಯಣ ವ್ರತ ನಡೆಯಿತು. ರಾತ್ರಿ ಶ್ರೀರಂಗ ಪೂಜೆ, ಸಂಕಷ್ಟ ಚತುರ್ಥಿ ಪೂಜೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಿತು. ಶ್ರೀದೇವರ ವಿಗ್ರಹವನ್ನು ಪುಷ್ಪಗಳಿಂದ ಅಲಂಕರಿಸಲಾಗಿತ್ತು.

ಗರಿಷ್ಠ 31°c | ಕನಿಷ್ಠ 21°c

ಸುದ್ದಿ ಸಿಂಚನ

ವಿದ್ಯಾರ್ಥಿ ಜೀವನದಲ್ಲಿ ಪಠ್ಯೇತರ ಚಟುವಟಿಕೆಯೂ ಮುಖ್ಯ: ರಾಜೇಂದ್ರ

ಕಳಸ: ಪಠ್ಯ ಚಟುವಟಿಕೆಗಳೊಂದಿಗೆ ಪಠ್ಯೇತರ ಚಟುವಟಿಕೆಗಳೂ ವಿದ್ಯಾರ್ಥಿ ಜೀವನದಲ್ಲಿ ಮಹತ್ವದ್ದಾಗಿದೆ. ಶಿಕ್ಷಣದ ಜತೆಗೆ ಪೂರಕ ಕ್ಷೇತ್ರಗಳಲ್ಲೂ ತಮ್ಮ ಸಾಮರ್ಥ್ಯ ವೃದ್ಧಿಸಿಕೊಳ್ಳಬೇಕು ಎಂದು ಕಾಲೇಜು ಅಭಿವೃದ್ಧಿ ಸಮಿತಿ ಕಾರ್ಯಾಧ್ಯಕ್ಷ ರಾಜೇಂದ್ರ ಹೆಬ್ಬಾರ್‌ಹಿತ್ಲುಮಕ್ಕಿ ಹೇಳಿದರು. ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ನಡೆದ 2025–26ನೇ ಸಾಲಿನ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿ, ಸಿಗುವ ಅವಕಾಶವನ್ನು ಸಮರ್ಪಕವಾಗಿ ಬಳಸಿದರೆ ಗುರಿ ಸಾಧನೆ ಸಾಧ್ಯ. ಕಾಲೇಜಿನಲ್ಲಿ ಪಡೆದ ಶಿಕ್ಷಣ ಮುಂದಿನ ಜೀವನಕ್ಕೆ ದಾರಿದೀಪವಾಗಲಿ ಎಂದು ಹೇಳಿದರು. ಕಳಸ ತಾಲೂಕು ಕಸಾಪ ಅಧ್ಯಕ್ಷ ಅ.ರಾ.ಸತೀಶ್ಚಂದ್ರ, ಕಾಫಿ ಬೆಳೆಗಾರ, ಹಿರಿಯ ಮುಖಂಡ ಕೆ.ಸಿ.ಧರಣೇಂದ್ರ ಮಾತನಾಡಿದರು. ಇದೇ ವೇಳೆ ಕ್ರೀಡೆ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಸಹಾಯಕ ಪ್ರಾಧ್ಯಾಪಕಿ ಎನ್.ನಿವೇದಿತಾ, ಎಂ.ಎಸ್.ಸುಧೀರ್‌ಜೈನ್, ಉಪನ್ಯಾಸಕರಾದ ಕಾವ್ಯ, ಕವನ, ಬಿ.ವಿ.ವಿಂದ್ಯಾ, ಅರ್ಚನಾ, ಪ್ರವೀಣ್, ಅನಂತ್ ಅವರನ್ನು ಸನ್ಮಾನಿಸಲಾಯಿತು.

ಗೋರಿಗಂಡಿ ಉರೂಸ್ ಮುಬಾರಕ್ ನಾಳೆ

ಬಾಳೆಹೊನ್ನೂರು: ಸಮೀಪದ ಗೋರಿಗಂಡಿಯ ಹಝ್ರತ್ ಖ್ವಾಜಾ ಅಸ್ಸಾಬುನ್ನಬೀ ದರ್ಗಾ ಶರೀಫ್‌ನ ಉರೂಸ್ ಮುಬಾರಕ್ ಮೇ 7ರಂದು ನಡೆಯಲಿದೆ ಎಂದು ದರ್ಗಾ ಶರೀಫ್ ಸೇವಾ ಸಮಿತಿಯ ಅಧ್ಯಕ್ಷ ಶಬ್ಬೀರ್‌ಅಹ್ಮದ್ ಖಾನ್ ತಿಳಿಸಿದ್ದಾರೆ. ಉರೂಸ್ ಅಂಗವಾಗಿ ಸಂದಲ್ ಮೆರವಣಿಗೆ ನಡೆಯಲಿದ್ದು, ಸಂದಲ್ ಮುರ್ಷದ್‌ಗಳ ದಾಯಿರ ಮತ್ತು ದಫ್‌ನೊಂದಿಗೆ ಜೇನುಗದ್ದೆ ಮಸೀದಿಯಿಂದ ಹೊರಟು ಕಡಬಗೆರೆ ಮಸೀದಿಯವರೆಗೆ ತಲುಪಿ ಬಳಿಕ ಗೋರಿಗಂಡಿ ದರ್ಗಾ ಶರೀಫ್‌ಗೆ ಸಂದಲ್, ಚಾದರ್, ಹೂ ಅರ್ಪಣೆ ಮತ್ತು ದುವಾ ಝಿಯಾರತ್ ಮಾಡಲಾಗುವುದು. ನಂತರ ಉರೂಸ್‌ನ ಸಮಾರೋಪ ಸಮಾರಂಭ ನಡೆಯಲಿದ್ದು, ಭದ್ರಾವತಿಯ ಹಫೀಜ್ ಒ ಖಾರಿ ಮೌಲಾನಾ ಸೈಯ್ಯದ್ ಮುಜಾಹಿದ್ ರಜಾ ನಜ್ಮಿ, ಡಾ.ಎಂ.ಎಸ್.ಎಂ. ಅಬ್ದುಲ್ ರಷೀದ್ ಜೈನಿ ಸಖಾಫಿ ಪ್ರಭಾಷಣ ಮಾಡಲಿದ್ದಾರೆ ಎಂದು ತಿಳಿಸಿದ್ದಾರೆ.

ಪದವಿ ಪೂರ್ವ ಕಾಲೇಜು ಪ್ರವೇಶಕ್ಕೆ ಅರ್ಜಿ

ಚಿಕ್ಕಮಗಳೂರು: ನಗರದ ಹೌಸಿಂಗ್ ಬೋರ್ಡ್‌ನಲ್ಲಿರುವ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪ್ರವೇಶಕ್ಕೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಕಲಾ (ಎಚ್‌ಇಪಿಎಸ್), ವಿಜ್ಞಾನ (ಪಿಸಿಎಂಬಿ), ವಾಣಿಜ್ಯ (ಎಚ್‌ಇಬಿಎ) ಕೋರ್ಸುಗಳಿಗೆ ಅರ್ಜಿ ಸಲ್ಲಿಸಬಹುದು. ವಿಜ್ಞಾನ ವಿದ್ಯಾರ್ಥಿಗಳಿಗೆ ನೀಟ್/ಜೆಇಇ/ಸಿಇಟಿ ತರಬೇತಿ ಲಭ್ಯವಿದೆ. ಹೆಚ್ಚಿನ ಮಾಹಿತಿಗೆ 9964786545 /9449729305 ಸಂಪರ್ಕಿಸಿ ಎಂದು ಕಾಲೇಜಿನ ಪ್ರಾಂಶುಪಾಲರ ಪ್ರಕಟಣೆ ತಿಳಿಸಿದೆ.



ಅಡಕೆ ಧಾರಣೆ

ಶಿವಮೊಗ್ಗ

- ಸರಕು............... 54099 - 98596
- ಬೆಟ್ಟೆ................ 56399 - 64589
- ರಾಶಿಇಡಿ............ 41099 - 56199
- ಗೊರಬಲು.......... 19162 - 45300

ಕಾಫಿ ಧಾರಣೆ

- ಅರೇಬಿಕಾ ಪಾರ್ಚ್‌ಮೆಂಟ್........23,600
- ಅರೇಬಿಕಾ ಚೆರ್‍ರಿ.....................14,050
- ರೋಬಸ್ಟಾ ಪಾರ್ಚ್‌ಮೆಂಟ್.......18,150
- ರೋಬಸ್ಟಾ ಚೆರ್‍ರಿ...................... 9,800

ರಬ್ಬರ್ ಧಾರಣೆ

- ಆರ್‌ಎಸ್‌ಎಸ್ (4)................247.00
- ಆರ್‌ಎಸ್‌ಎಸ್ (5)................242.00
- ಲಾಟ್ ಶೀಟ್......................212.00



ಕಳಸದಲ್ಲಿ ಸರ್ಕಾರಿ ಕಾಲೇಜಿನ 2025-26ನೇ ಸಾಲಿನ ಸಮಾರೋಪ ಸಮಾರಂಭದಲ್ಲಿ ಸಹಾಯಕ ಪ್ರಾಧ್ಯಾಪಕಿ ನಿವೇದಿತಾ, ಸುಧೀರ್‌ಜೈನ್, ಕಾವ್ಯ, ಕವನ, ವಿಂದ್ಯಾ, ಅರ್ಚನಾ, ಪ್ರವೀಣ್, ಅನಂತ್ ಅವರನ್ನು ಸನ್ಮಾನಿಸಲಾಯಿತು. ಕಾಲೇಜು ಸಮಿತಿಯ ರಾಜೇಂದ್ರ ಹೆಬ್ಬಾರ್‌ಇತರರು ಇದ್ದರು.



ಶೃಂಗೇರಿಯಲ್ಲಿ ಮಂಗಳವಾರ ವಿವಿಧ ಬ್ರಾಹ್ಮಣ ಸಂಘಟನೆಗಳು, ಜನಿವಾರ ಧರಿಸುವ ಸಮುದಾಯಗಳ ಸಂಘಟನೆಗಳು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದವು. ತಾಲೂಕು ಬ್ರಾಹ್ಮಣ ಮಹಾ ಸಭಾದ ಜಿ.ಎಂ.ಸತೀಶ್, ರವಿಕುಮಾರ್, ಸುಮಂಗಲಿ ಇತರ ಮುಖಂಡರು ಇದ್ದರು.

ಜನಿವಾರ ಕೇಸ್: ವಿವಿಧ ಬ್ರಾಹ್ಮಣ ಸಂಘಟನೆಗಳ ಕಿಡಿ

ಜನಿವಾರ ಧಾರಣೆ ಸಮುದಾಯಗಳಿಂದ ಶೃಂಗೇರಿ ಬಂದ್ | ಅಂಗಡಿ, ಹೋಟೆಲ್ ಮುಚ್ಚಿ ವರ್ತಕರ ಬೆಂಬಲ

• **ಕನ್ನಡಪ್ರಭ ವಾರ್ತೆ** ಶೃಂಗೇರಿ

ಸಿಇಟಿ ಪರೀಕ್ಷೆಯಲ್ಲಿ ಬ್ರಾಹ್ಮಣ ಜನಾಂಗದ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಘಟನೆ, ಮಾಂಗಲ್ಯ ಸರ, ಮೂಗುತಿ, ಕಿವಿ ಓಲೆ ತೆಗೆಸಿದ ಕ್ರಮ ಖಂಡಿಸಿ ತಾಲೂಕಿನ ವಿವಿಧ ಬ್ರಾಹ್ಮಣ ಸಂಘಟನೆಗಳು, ಜನಿವಾರ ಧರಿಸುವ ಸಮುದಾಯಗಳ ಸಂಘಟನೆಗಳು ಮಂಗಳವಾರ ಕರೆ ನೀಡಿದ್ದ ಶೃಂಗೇರಿ ಬಂದ್, ಪ್ರತಿಭಟನೆ ಶಾಂತಿಯುತವಾಗಿ ನಡೆಯಿತು.

ಪಟ್ಟಣದಲ್ಲಿ ವರ್ತಕರು ಅಂಗಡಿ ಹೋಟೇಲುಗಳನ್ನು ಕೆಲಹೊತ್ತು ಬಂದ್ ಮಾಡಿ ಪ್ರತಿಭಟನೆಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದರು,ಬೆಳಿಗ್ಗೆ ಪಟ್ಟಣ ಪಂಚಾಯಿತಿ ಮುಂಭಾಗದಿಂದ ಹೊರಟ ಬೃಹತ್ ಪ್ರತಿಭಟನೆ ಮುಖ್ಯ ರಸ್ತೆಯಲ್ಲಿ ಸಾಗಿ ತಾಲೂಕು ಕಚೇರಿ ಎದರು ಸಮಾವೇಶಗೊಂಡಿತು.

ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದ ತಾಲೂಕು ಬ್ರಾಹ್ಮಣ ಮಹಾ ಸಭಾದ ಜಿ.ಎಂ.ಸತೀಶ್, ಬ್ರಾಹ್ಮಣ ಸಮುದಾಯದ ವಿರುದ್ದ ದ್ವೇಷ ಹರಡುವ ಕೆಲಸ ಮಾಡಲಾಗುತ್ತಿದೆ.ಇದು ಹಿಂದಿನಿಂದಲೂ ನಡೆದುಕೊಂಡು ಬರುತ್ತಿದೆ.ಪ್ರಗತಿಪರ,ಎಡಪಂಥೀಯ ಹೆಸರಲ್ಲಿ ಜನರಲ್ಲಿ ದ್ವೇಷ ಮನೋಭಾವನೆ ಬಿತ್ತುವ ಕೆಲಸ ಮಾಡಲಾಗುತ್ತಿದೆ,



ಶೃಂಗೇರಿ ತಾಲೂಕು ಕಚೇರಿಯಲ್ಲಿ ತಹಸೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಜನಿವಾರ ತೆಗೆಸಿದರೆ ಬ್ರಾಹ್ಮಣ ಸಮುದಾಯಕ್ಕೆ ಅವಮಾನವಾಗುತ್ತದೆ ಎಂಬ ವಿಕೃತ ಆನಂದ ಪಡುವ ಜನರಿಂದ ಇಂತಹ ಕೆಲಸ ನಡೆಯುತ್ತಿದೆ. ಜನಿವಾರವನ್ನು ಕೇವಲ ಬ್ರಾಹ್ಮಣ ಸಮುದಾಯ ಮಾತ್ರ ಧರಿಸುವುದಿಲ್ಲ.ಅನೇಕ ಸಮುದಾಯಗಳಿವೆ. ಬ್ರಾಹ್ಮಣ ಸಮುದಾಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ.ಬ್ರಾಹ್ಮಣ ದ್ವೇಷಿ,ವಿಷ ಬೀಜ ಬಿತ್ತುವ ಕೆಲಸ ಬಿಡಬೇಕು.ಹಿಂದೂ ಧರ್ಮ ಸಂಸ್ಕೃತಿ, ಸಂಸ್ಕಾರಗಳ ಜತೆ ಚೆಲ್ಲಾಟವಾಡುವ ಕೆಲಸ ಬೇಡ. ಕಾನೂನು ರೂಪಿಸಬೇಕು.ಇಂತಹ ನಿಯಮಗಳನ್ನು ಕೈಬಿಡಬೇಕು ಎಂದರು.

ತಾಲೂಕು ಬ್ರಾಹ್ಮಣ ಸಭಾದ ಅಧ್ಯಕ್ಷ ಬಿ.ಎಲ್.ರವಿಕುಮಾರ್‌ಮಾತನಾಡಿ, ಜನಿವಾರ ಸಮ್ಮ ಸಮಾಜದ ಅಸ್ಮಿತೆ.ಇಂತಹ ಜನಿವಾರವನ್ನು ಪರೀಕ್ಷಾ ಕೇಂದ್ರದಲ್ಲಿ ಕಟ್ ಮಾಡಿ ತೆಗೆಯಲಾಗಿದೆ.ಸ ರ್ಕಾರ ಪರೀಕ್ಷೆಗೆ ಕಾನೂನು ನಿಯಮಾವಳಿ ರೂಪಿಸಬೇಕು. ತಪ್ಪಿತಸ್ಥರ ವಿರುದ್ದ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ತಾಲೂಕು ಬ್ರಾಹ್ಮಣ ಮಹಾಸಭಾ ಮಹಿಳಾ ಘಟಕದ ಅಧ್ಯಕ್ಷೆ ಸುಮಂಗಲಿ ಆನಂದಸ್ವಾಮಿ ಮಾತನಾಡಿ, ಬ್ರಾಹ್ಮಣರು ಹೇಡಿಗಳಲ್ಲ.ಯಾರಿಗೂ ಅನ್ಯಾಯ ಮಾಡಿದವರಲ್ಲ. ಸಮಾಜದ ಎಲ್ಲಾ ವರ್ಗದವರಿಗೂ ಬೇಕಾದ ಸಮುದಾಯ.ಆದರೆ ಜನಿವಾರ,ಸಂಸ್ಕಾರದ ವಿಷಯದಲ್ಲಿ ಇಂದು ಬೀದಿಗಿಳಿದಿರುವುದು ವಿಪರ್ಯಾಸ.ವಸ್ತ್ರ ಸಂಹಿತೆ ಹೆಸರಲ್ಲಿ ಬ್ರಾಹ್ಮಣ ಜನಾಂಗದ ಅಭ್ಯರ್ಥಿಗಳ ಜನಿವಾರ ಕತ್ತರಿಯಲ್ಲಿ ಕಟ್ ಮಾಡಿ ತೆಗೆದಿರುವುದು ಖಂಡನೀಯ ಎಂದರು.

ಬ್ರಾಹ್ಮಣ ಸಮುದಾಯದವರ ತಾಳ್ಮೆ ಪರೀಕ್ಷೆ ಮಾಡುವುದು ಬೇಡ.ಧರ್ಮ,ಸಂಪ್ರದಾಯ,ಸಂಸ್ಕೃತಿಗೆ ಧಕ್ಕೆಯಾದರೆ ಚಂಡಿ ಚಾಮುಂಡಿಗಳಾಗಲು ಗೊತ್ತಿದೆ. ಜನಿವಾರ ತೆಗೆಸಿದ ಅಧಿಕಾರಿಗಳ ವಿರುದ್ದ ಕಠಿಣ ಕ್ರಮ ಜರುಗಿಸಬೇಕು. ಇಂತಹ ಘಟನೆಗಳು ಮತ್ತೆ ಮತ್ತೆ ಮರುಕಳಿಸಬಾರದು. ಕೇವಲ ಶೃಂಗೇರಿಯಲ್ಲ ಇಡೀ ರಾಜ್ಯದಲ್ಲಿ ಪ್ರತಿಭಟನೆ ನಡೆಯಲಿದೆ ಎಂದರು.

ಕಾಂಗ್ರೆಸ್ ಮುಖಂಡ ಕೆ.ಎಂ.ರಮೇಶ್ ಭಟ್, ಜಯಶ್ರೀ ಗಣೇಶ್, ವಿಜಯರಂಗ ಗುಡ್ಡೇತೋಟ, ಅಂಬಳೂರು ರಾಮಕೃಷ್ಣ, ತಲಗಾರು ಉಮೇಶ್ ಮತ್ತಿತರರು ಮಾತನಾಡಿದರು.

ಬಿಸಿಲ ತಾಪವನ್ನು ಲೆಕ್ಕಿಸದೇ ಸಾವಿರಾರು ಸಂಖ್ಯೆಯಲ್ಲಿ ಬ್ರಾಹ್ಮಣ ಸಂಘಟನೆಗಳ ಕಾರ್ಯಕರ್ತರು ಹಾಜರಿದ್ದರು.ಇದೇ ಸಂದರ್ಭದಲ್ಲಿ ತಹಸಿಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ತಹಸಿಲ್ದಾರ್ ಅನೂಪ್ ಸಂಜೋಗ್ ಮನವಿ ಸ್ವೀಕರಿಸಿದರು.

ದಾನ ಧರ್ಮಗಳಿಂದ ಮನುಷ್ಯನಿಗೆ ಶ್ರೇಷ್ಠತೆ

ಶಿವಲಿಂಗೇಶ್ವರ ಶ್ರೀ ಅಭಿಮತ | ವೀರಭದ್ರ ದೇವಾಲಯ ಪ್ರವೇಶ, ವಿಮಾನ ಗೋಪುರ ಕಳಸಾರೋಹಣ

• **ಕನ್ನಡಪ್ರಭ ವಾರ್ತೆ** ಕಡೂರು

ಮನುಷ್ಯ ದಾನ ಧರ್ಮಗಳಿಂದ ಶ್ರೇಷ್ಠನಾಗುತ್ತಾನೇ ಹೊರತು ತನ್ನ ಶ್ರೀಮಂತಿಕೆಯಿಂದಲ್ಲ ಎಂದು ಬೆಳಗಾವಿಯ ನಿಡುಸೂಸಿ ಮಠದ ಜಗದ್ಗುರು ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ ಹೇಳಿದರು.

ತಾಲೂಕಿನ ಶಿವಗಂಗಾ ಗಿರಿ ಕ್ಷೇತ್ರದ ಶ್ರೀ ವೀರಭದ್ರೇಶ್ವರ ಸ್ವಾಮಿ ನೂತನ ದೇವಾಲಯ ಪ್ರವೇಶ ಮತ್ತು ವಿಮಾನ ಗೋಪುರ ಕಳಸಾರೋಹಣ, ಧಾರ್ಮಿಕ ಸಮಾರಂಭ ಉದ್ಘಾಟಿಸಿ ಮಾತನಾಡಿ. 12ನೇ ಶತಮಾನದಲ್ಲಿ ಬಸವಣ್ಣನವರು ಲಿಂಗಧಾರಣೆ ಮಾಡಿ ಎಲ್ಲ ವರ್ಗದವರಿಗೂ ದೇವಾಲಯ ಪ್ರವೇಶಕ್ಕೆ ಮುಕ್ತ ಅವಕಾಶ ಕಲ್ಪಿಸಿ ಸಮ ಸಮಾಜ ನಿರ್ಮಾಣಕ್ಕೆ ಒತ್ತು ನೀಡಿದ್ದರು ಎಂದರು.

ಮಾಜಿ ಶಾಸಕ ವೈ.ಎಸ್.ವಿ.ದತ್ತ ಮಾತನಾಡಿ, ಶಿವಗಂಗಾ ಗಿರಿ ಕ್ಷೇತ್ರ ಪವಿತ್ರ ಕ್ಷೇತ್ರವಾಗಿ ರೂಪುಗೊಂಡಿದೆ. ಸುತ್ತ ಮುತ್ತಲಿನ ಅಸಂಖ್ಯಾತ ಭಕ್ತ ಸಮೂಹದ ಆರಾಧ್ಯ ದೈವವಾಗಿ ಇಂದಿಗೂ ಕ್ಷೇತ್ರ ಪಾವಿತ್ರ್ಯತೆ ಕಾಪಾಡಿಕೊಂಡಿರುವುದು ಧಾರ್ಮಿಕ ಸಂಸ್ಕೃತಿ ನೆಲೆಯ ಆಳವಾಗಿ ಬೇರು ಬಿಟ್ಟಿದೆ ಎಂದರು.



ಕಡೂರಿನ ಶಿವಗಂಗಾ ಗಿರಿ ಕ್ಷೇತ್ರದ ಶ್ರೀ ವೀರಭದ್ರೇಶ್ವರ ನೂತನ ದೇವಾಲಯ ಪ್ರವೇಶೋತ್ಸವ ಧಾರ್ಮಿಕ ಸಮಾರಂಭವನ್ನು ಜಗದ್ಗುರು ಪಂಚಮ ಶಿವಲಿಂಗೇಶ್ವರ ಶ್ರೀ ಉದ್ಘಾಟಿಸಿದರು.

ದೇವಾಲಯದ ನಿರ್ಮಾಣಕ್ಕೆ ಕೊಡುಗೆ ನೀಡಿದ ಸುಮನ, ಕೆ.ಎಂ.ಕೆ ಶರ್ಮ ದಂಪತಿಯನ್ನು ಸನ್ಮಾನಿಸಲಾಯಿತು.

ಮಾಜಿ ಶಾಸಕ ಬೆಳ್ಳಿಪ್ರಕಾಶ್, ಚಿಂತಕ ಚಟ್ನಳ್ಳಿ ಮಹೇಶ್, ಕೆ.ಬಿದರೆ ದೊಡ್ಡ ಮಠದ ಶ್ರೀ ಪ್ರಭು ಕುಮಾರ ಶಿವಾಚಾರ್ಯ ಸ್ವಾಮೀಜಿ, ಬೀರೂರು ರಂಭಾಪುರಿ ಶಾಖಾ ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಕೋಡಿಮಠ ಮಹಾಸಂಸ್ಥಾನದ ಚೇತನ್ ಮರಿದೇವರು, ದೇವಾಲಯ ಅಭಿವೃದ್ಧಿ ಸಮಿತಿ ಅಧ್ಯಕ್ಷ ಕೆ.ಎಂ. ದೇವರಾಜಪ್ಪ, ಗೌರವ ಕಾರ್ಯದರ್ಶಿ ವಿ.ಎಂ. ಗಂಗಾಧರಪ್ಪ, ಕಾರ್ಯದರ್ಶಿ ಡಿ. ಗಂಗಾಧರಪ್ಪ, ಹಾಸನ ಹಾಲು ಒಕ್ಕೂಟದ ನಿರ್ದೇಶಕ ಟಿ.ಕೆ. ಜಗದೀಶ್, ಶೆಟ್ಟಿಹಳ್ಳಿ ರಾಮಪ್ಪ, ಸಾಣೇಹಳ್ಳಿ ಆರಾಧ್ಯ, ದೇವರಾಜ್ ಮತ್ತಿತರು ಇದ್ದರು.

ಉತ್ತಮ ಸಮಾಜಕ್ಕೆ ಯುವಜನ ಮುಖ್ಯ

ನರಸಿಂಹರಾಜಪುರ: ಉತ್ತಮ ಸಮಾಜ ನಿರ್ಮಿಸುವಲ್ಲಿ ಯುವ ಜನರ ಪಾತ್ರ ಪ್ರಮುಖವಾಗಿದೆ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಭಿವೃದ್ಧಿ ಸಮಿತಿ ಕಾರ್ಯಾಧ್ಯಕ್ಷ ಪ್ರಶಾಂತ ಶೆಟ್ಟಿ ತಿಳಿಸಿದರು.

ತಾಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2025–26 ನೇ ಸಾಲಿನ ಸಾಂಸ್ಕೃತಿಕ, ಕ್ರೀಡೆ, ಎನ್.ಎಸ್.ಎಸ್, ರೋವರ್ಸ್ ಮತ್ತು ರೇವರ್ಸ್ ಹಾಗೂ ಯುವ ರೆಡ್ ಕ್ರಾಸ್ ವೇದಿಕೆಗಳ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಕಳೆದ 3 ವರ್ಷದಲ್ಲಿ ಕಲಿತ ಶಿಕ್ಷಣ, ಪಠ್ಯೇತರ ಚಟುವಟಿಕೆ, ಪ್ರೀತಿ, ನಂಬಿಕೆಗಳ ಸವಿ ನೆನಪಿನ ಬುತ್ತಿಯನ್ನು ಮುಂದಿನ ನಿಮ್ಮ ಜೀವನದಲ್ಲೂ ಅಳವಡಿಸಿಕೊಳ್ಳಿ ಎಂದು ಕರೆ ನೀಡಿದರು.

ಹೊಳೆಹೊನ್ನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪ್ರೊ.ಎಚ್.ರುದ್ರಮುನಿ ವಿಶೇಷ ಉಪನ್ಯಾಸ ನೀಡಿ, ಶಿಕ್ಷಣ ಎಂದರೆ ಕಲಿಕೆ ಅನುಭವವಾಗಿದೆ. ಅಧ್ಯಾಪಕರು ವಿದ್ಯಾರ್ಥಿಗಳಿಗೆ ಜ್ಞಾನದ ಹಣತೆ ದೀಪ ಹಚ್ಚಿದ್ದಾರೆ. ಪಠ್ಯ ಹಾಗೂ ಪಠ್ಯೇತರ ಚಟುವಟಿಗಳಿದ್ದು ಪಠ್ಯೇತರ ಶಿಕ್ಷಣದಲ್ಲಿ ಬರುವ ಎನ್.ಎಸ್.ಎಸ್.ಶಿಬಿರಗಳಲ್ಲಿ ಭಾಗವಹಿಸಬೇಕು. ಎನ್.ಎಸ್.ಎಸ್. ಶಿಬಿರದಲ್ಲಿ ಭಾಗವಹಿಸುತ್ತಾ ಬಂದರೆ ದೇಶದ ರಾಷ್ಟ್ರಪತಿಗಳ ಕಾರ್ಯಕ್ರಮದಲ್ಲೂ ಭಾಗವಹಿಸುವ ಅವಕಾಶ ಸಿಗಬಹುದು ಎಂದರು.

ಇದೇ ಸಂದರ್ಭದಲ್ಲಿ ಕಾಲೇಜಿನ ವಾರ್ಷಿಕ ಸಂಚಿಕೆ ಚಿಗುರು– 2025–26 ಬಿಡುಗಡೆ ಮಾಡಲಾಯಿತು. ಕೆ- ಸೆಟ್ ಉಪನ್ಯಾಸಕ ಅರ್ಹತೆ ಪರೀಕ್ಷೆ ಪಾಸು ಮಾಡಿದ ವಿದ್ಯಾರ್ಥಿನಿ ಆಯುಶಾ ಸಿದ್ದಿಕಿ, ಗುಡ್ಡಗಾಡು ಓಟದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದ ವಿದ್ಯಾರ್ಥಿ ಆರ್.ಸಿ.ಶ್ರೇಯಸ್ ಅವರನ್ನು ಸನ್ಮಾನಿಸಲಾಯಿತು.

ಸಿಡಿಸಿ ಸದಸ್ಯೆ ಜುಬೇದ, ಕಾಲೇಜಿನ ಪ್ರಾಂಶುಪಾಲ ಡಾ.ಧನಂಜಯ, ಸಿಡಿಸಿ ಸದಸ್ಯರಾದ ಎಂ.ಎಸ್.ಶಶಿಧರ, ಬಿನು, ಉಪನ್ಯಾಸಕರಾದ ಸಿ.ಸವಿತ, ಮಂಜು, ಆರ್.ಕೆ. ಪ್ರಸಾದ್, ದಿನಕರ್‌ನಾಯಕ್, ಅಶೋಕ್ ಕುಮಾರ್ ಇದ್ದರು.

ವಿವಿಧ ಆಟೋಟ, ಸಾಂಸ್ಕೃತಿಕ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು. ಶಂಕರ ನಾಯಕ್ ಸ್ವಾಗತಿಸಿದರು. ಸಾನಿಯಾ ಕಾರ್ಯಕ್ರಮ ನಿರೂಪಿಸಿದರು.ಮಂಜುನಾಥ್ ವಂದಿಸಿದರು.

ಶ್ರೀಕಂಠಪ್ಪ ರೀತಿಯಲ್ಲಿ ಮಾದರಿ ಕೆಲಸ ಮಾಡುತ್ತಿದ್ದೇನೆ

ಶಾಸಕ ತಮ್ಮಯ್ಯ ಹೇಳಿಕೆ | ಕಾಂಕ್ರೀಟ್ ರಸ್ತೆ ಉದ್ಘಾಟನೆ | ಸಿಎಂ ವಿಶೇಷ ಅನುದಾನ ಬಳಕೆ

ಚಿಕ್ಕಮಗಳೂರು: ಜಾತಿ, ಪಕ್ಷ ರಹಿತವಾಗಿ ಕೆಲಸ ಮಾಡಿರುವ ಡಿ.ಸಿ. ಶ್ರೀಕಂಠಪ್ಪ ಅವರ ರೀತಿಯಲ್ಲಿ ಮಾದರಿ ಕೆಲಸ ಮಾಡುತ್ತಿದ್ದೇನೆ ಎಂದು ಶಾಸಕ ಎಚ್.ಡಿ.ತಮ್ಮಯ್ಯ ಹೇಳಿದರು.

ನಗರದಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ನಿರ್ಮಾಣ ಮಾಡಲಾದ ಭಕ್ತರಹಳ್ಳಿಯಿಂದ ಕೆಳದೇವರಹಳ್ಳಿಗೆ ಹೋಗುವ ನೂತನ ಕಾಂಕ್ರೀಟ್ ರಸ್ತೆ ಉದ್ಘಾಟಿಸಿ ಮಾತನಾಡಿ, ಡಿ.ಸಿ.ಶ್ರೀಕಂಠಪ್ಪ ಎಂದಿಗೂ ಜಾತಿ, ಪಕ್ಷದ ರಾಜಕಾರಣ ಮಾಡಲಿಲ್ಲ. ಅವರನ್ನು ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಎಲ್ಲಾ ಜಾತಿ, ಧರ್ಮದ ಜನರು ಇಷ್ಟ ಪಡುತ್ತಿದ್ದರು. ಅದೇ ಮಾದರಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರು.

ಜನಪ್ರತಿನಿಧಿಯಾಗಲು ಆಶೀರ್ವಾದ ಮಾಡಿದ್ದೀರಾ, ಮತ್ತೆ ಆಶೀರ್ವಾದ ಮಾಡಿ. 'ನಾನು' ಎಂಬ ಅಹಂಕಾರ ಕೊಡಬೇಡ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಅಹಂ ಇದ್ದವರಿಗೆ ದೇವರು ಎಲ್ಲಿಗೆ ಕಳುಹಿಸಿದ್ದಾರೆ ಎಂಬುದು ನೋಡಿದ್ದೇವೆ ಎಂದು ಹೇಳಿದರು.

ಚಿಕ್ಕಮಗಳೂರು ನಗರದ ರಸ್ತೆಗಳು ಗುಂಡಿ ಬಿದ್ದು ಹಾಳಾಗಿದ್ದವು. 'ಸೈಕಲ್ ತುಳಿ, ಸಮಸ್ಯೆ ತಿಳಿ' ಕಾರ್ಯಕ್ರಮ ಹಮ್ಮಿ ಕೊಂಡು ಸಮಸ್ಯೆ ತಿಳಿಯುವ ಜತೆಗೆ ಎಂಜಿನಿಯರ್‌ಅವರೊಂದಿಗೆ ನಗರ ಪ್ರದಕ್ಷಣೆ ಮಾಡಿ ಆದ್ಯತೆ ಮೇಲೆ ರಸ್ತೆ ಡಾಂಬರೀಕರಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ಹೇಳಿದರು.

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಂಜೇಗೌಡ, ಜಿಪಂ ಮಾಜಿ ಅಧ್ಯಕ್ಷ ಕೆ.ಮಹಮದ್ ಮಾತನಾಡಿದರು. ಗ್ರಾಮಸ್ಥರಾದ ಪರ್ವತೇಗೌಡ, ಶಿವಕುಮಾರ್, ಕಲ್ಲೇಶ್ ಹಾಜರಿದ್ದರು.

ಕಾರ್ಮಿಕರಿಗೆ ದುಡಿಮೆಗೆ ತಕ್ಕುದಾದ ಸೌಲಭ್ಯ ದೊರೆಯುವಂತೆ ಆಗಬೇಕು

ನ್ಯಾ.ನಂದಿನಿ ಅಭಿಮತ | ವಿಶ್ವ ಕಾರ್ಮಿಕರ ದಿನಾಚರಣೆ



ಕೊಪ್ಪ ನ್ಯಾಯಾಲಯದ ಆವರಣದಲ್ಲಿ ನಡೆದ ಕಾರ್ಮಿಕ ದಿನಾಚರಣೆಯನ್ನು ನ್ಯಾಯಾಧೀಶೆ ನಂದಿನಿ ಉದ್ಘಾಟಿಸಿದರು. ವಕೀಲ ನಾರಾಯಣ ಸ್ವಾಮಿ, ವಿಶ್ವನಾಥ್ ಇತರರು ಇದ್ದರು.

ಕೊಪ್ಪ: ಕಾರ್ಮಿಕರ ದುಡಿಮೆಗೆ ತಕ್ಕ ಸೌಲಭ್ಯಗಳು ಸಿಗುವಂತಾಗಬೇಕು. ದಿನಕ್ಕೆ ಇಂತಿಷ್ಟೇ ಗಂಟೆಗಳ ಕೆಲಸ ಉಳಿದಂತೆ ವಿಶ್ರಾಂತಿ ನೀಡಬೇಕೆನ್ನುವ ದೃಷ್ಟಿಯಿಂದ 1886ರಲ್ಲಿ ವಿಶ್ವಸಂಸ್ಥೆಯು ಪ್ರತಿ ವರ್ಷವೂ ಮೇ ಒಂದರಂದು ವಿಶ್ವಕಾರ್ಮಿಕ ದಿನಾಚರಣೆ ಜಾರಿಗೊಳಿಸಿದೆ ಎಂದು ನ್ಯಾಯಾಧೀಶೆ ನಂದಿನಿ ಹೇಳಿದರು.

ತಾಲೂಕು ಕಾನೂನು ಸೇವಾ ಸಮಿತಿ ವಕೀಲರ ಸಂಘ, ಅಭಿಯೋಜನಾ ಇಲಾಖೆ ತಾಲೂಕು ಆಡಳಿತ ಆರೋಗ್ಯ, ಕುಟುಂಬ ಕಲ್ಯಾಣ, ಶಿಕ್ಷಣ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ, ಅರಣ್ಯ, ಆರಕ್ಷಕ, ಕಾರ್ಮಿಕ ಇಲಾಖೆ ಜೆಸಿಐ–ಕೊಪ್ಪ ಸಹಯೋಗದೊಂದಿಗೆ ಕೊಪ್ಪ ನ್ಯಾಯಾಲಯದ ಆವರಣದಲ್ಲಿ ಸೋಮವಾರ ನಡೆದ ಕಾರ್ಮಿಕ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಆಯಾ ಪ್ರದೇಶಗಳಲ್ಲಿ ಬೆಳೆಯುವ ಬೆಳೆಗಳಿಗೆ ಅನುಗುಣವಾಗಿ ಅಲ್ಲಿನ ಕೆಲಸ ಕಾರ್ಯಗಳಿಗೆ ತಕ್ಕಂತೆ ಕಾರ್ಮಿಕರನ್ನು ಬಳಸಿಕೊಳ್ಳಲಾಗುತ್ತಿದೆ. ಕಾರ್ಮಿಕರ ರಕ್ಷಣೆ ಮತ್ತು ಅವರಿಗೆ ಸಿಗುವ ಸೌಲಭ್ಯ ನೀಡಲು ಇದರಿಂದ ಸಾಧ್ಯವಾಗುವಂತೆ ಸರ್ಕಾರ ಕಾರ್ಮಿಕ ಇಲಾಖೆ ಕಾರ್ಯ ನಿರ್ವಹಿಸುತ್ತಿದೆ. ಚಿಕ್ಕ ಮಕ್ಕಳನ್ನು ಬಾಲ ಕಾರ್ಮಿಕರಾಗಿ ಕಾರ್ಖಾನೆ, ಪಟಾಕಿ ಕಾರ್ಖಾನೆ, ಹೋಟೇಲುಗಳಲ್ಲಿ ಮಕ್ಕಳನ್ನು ಬಾಲ ಕಾರ್ಮಿಕರನ್ನು ದುಡಿಸಿಕೊಳ್ಳುವುದು ಅಪರಾಧ ಎಂದರು.

ಕೊಪ್ಪ ತಾಲೂಕು ವಕೀಲರ ಸಂಘದ ಕಾರ್ಯದರ್ಶಿ ಸುಚೇತ ಭಂಡಾರಿ ಮಾತನಾಡಿ, ಕಾರ್ಮಿಕ ಮಹಿಳೆಯರಿಗೆ ಸಮಾನ ಹಕ್ಕು ಮತ್ತು ಸೌಲಭ್ಯ ದೊರೆತಾಗ ಕಾರ್ಮಿಕ ದಿನಾಚರಣೆ ಮತ್ತಷ್ಟು ಅರ್ಥಪೂರ್ಣವಾಗಲಿದೆ. ಕಾರ್ಯ ನಿರ್ವಹಿಸುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳಿಂದ ಮಹಿಳೆ ಮುಜುಗರಕ್ಕೊಳಗಾಗುವುದನ್ನು ತಪ್ಪಿಸಲು ಕಾನೂನು ಮತ್ತಷ್ಟು ಬಲಗೊಳಿಸಲಾಗಿದೆ ಎಂದರು.

ಅಧ್ಯಕ್ಷ ಆದರ್ಶ, ವಕೀಲ ನಾರಾಯಣ ಸ್ವಾಮಿ, ವಿಶ್ವನಾಥ್, ನವೀನ್ ರಾವ್, ವೆಂಕಟೇಶ್, ಮಹೇಂದ್ರ ಹಾಜರಿದ್ದರು.

ವಿಜಯೋತ್ಸವ ಕಾರ್ಯಕ್ರಮ | ಭಾಸ್ಕರ್ ಹೇಳಿಕೆ | ಪಂಚ ರಾಜ್ಯ ಚುನಾವಣೆಯಲ್ಲಿ ಬಿಜೆಪಿ ಗೆಲುವಿಗೆ ಸಂಭ್ರಮ | ಮರು ಮತ ಎಣಿಕೆಯಲ್ಲಿ ಜೀವರಾಜ್ ಗೆಲುವಿಗೆ ಹರ್ಷ

ಕಾಂಗ್ರೆಸ್ ತಪ್ಪಿನಿಂದಾಗಿ ಜೀವರಾಜ್‌ಗೆ 3 ವರ್ಷ ಅಜ್ಞಾತವಾಸ

• **ಕನ್ನಡಪ್ರಭ ವಾರ್ತೆ** ಬಾಳೆಹೊನ್ನೂರು

ಕಾಂಗ್ರೆಸ್ ಪಕ್ಷದವರು ಮಾಡಿದ ಅನ್ಯಾಯದಿಂದಾಗಿ ಡಿ.ಎನ್.ಜೀವರಾಜ್ ಮೂರು ವರ್ಷಗಳ ಕಾಲ ಅಜ್ಞಾತವಾಸವನ್ನು ಅನುಭವಿಸಬೇಕಾಯಿತು ಎಂದು ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಭಾಸ್ಕರ್ ವೆನಿಲ್ಲಾ ಹೇಳಿದರು.

ಶೃಂಗೇರಿ ಕ್ಷೇತ್ರದ ಮರು ಮತ ಎಣಿಕೆಯಲ್ಲಿ ಡಿ.ಎನ್.ಜೀವರಾಜ್ ವಿಜಯಿಯಾದ, ಪಂಚ ರಾಜ್ಯ ಚುನಾವಣೆಯಲ್ಲಿ ಬಿಜೆಪಿ ಗೆಲುವಿನ ಹಿನ್ನೆಲೆಯಲ್ಲಿ ಪಟ್ಟಣದ ಜೇಸಿ ವೃತ್ತದಲ್ಲಿ ಬಿಜೆಪಿ ಆಯೋಜಿಸಿದ್ದ ವಿಜಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜೀವರಾಜ್ ಅವರು ಮೂರು ವರ್ಷಗಳ ಸತತವಾಗಿ ಕೋರ್ಟಿನಲ್ಲಿ ಹೋರಾಟ ಮಾಡಿದ ಪರಿಣಾಮ ಇಂದು ನ್ಯಾಯವನ್ನು ಪಡೆದು ಗೆಲುವು ಸಾಧಿಸಿದ್ದು, ಇದು ಕಾರ್ಯಕರ್ತರ ಶ್ರಮಕ್ಕೆ ದೊರೆತ ಪ್ರತಿಫಲವಾಗಿದೆ. ಶೃಂಗೇರಿ ಕ್ಷೇತ್ರದಲ್ಲಿ ಇನ್ನು ಅಭಿವೃದ್ಧಿಯ ಶಕೆ ಆರಂಭಗೊಳ್ಳಲಿದೆ ಎಂದು ಹೇಳಿದರು.



ಶೃಂಗೇರಿ ಮರು ಮತ ಎಣಿಕೆಯಲ್ಲಿ ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್ ಗೆಲುವು ಸಾಧಿಸಿದ ಹಿನ್ನೆಲೆ ಬಿಜೆಪಿ ಕಾರ್ಯಕರ್ತರು ಬಾಳೆಹೊನ್ನೂರಿನಲ್ಲಿ ವಿಜಯೋತ್ಸವ ಆಚರಿಸಿದರು.

ಪಂಚರಾಜ್ಯದ ಚುನಾವಣೆಯಲ್ಲಿ ನರೇಂದ್ರ ಮೋದಿ ಹಾಗೂ ಅಮಿತ್ ಷಾ ಅವರ ನೇತೃತ್ವದಲ್ಲಿ ಬಿಜೆಪಿ ಅಭೂತಪೂರ್ವ ಗೆಲುವನ್ನು ಸಾಧಿಸಿದ್ದು, ದೇಶ, ವಿದೇಶಗಳಲ್ಲಿ ನರೇಂದ್ರ ಮೋದಿಯವರನ್ನು ಜನರು ಮೆಚ್ಚಿದ್ದಾರೆ. 2028ರಲ್ಲೂ ರಾಜ್ಯದಲ್ಲಿ ನಡೆಯುವ ಚುನಾವಣೆಯಲ್ಲಿಯೂ ಬಿಜೆಪಿ ಪಕ್ಷವನ್ನು ಅತೀ ದೊಡ್ಡ ಸಂಖ್ಯೆಯಲ್ಲಿ ಗೆಲ್ಲಿಸುವ ಭರವಸೆ ನಮಗೆ ಮೂಡಿದೆ ಎಂದರು.

ಪಿಎಸಿಎಸ್ ಮಾಜಿ ಅಧ್ಯಕ್ಷ ಟಿ.ಎಂ.ಉಮೇಶ್ ಕಲ್ಮಕ್ಕಿ ಮಾತನಾಡಿ, ಶೃಂಗೇರಿ ಕ್ಷೇತ್ರದಲ್ಲಿ ಕಳೆದ 8 ವರ್ಷಗಳ ಕಾಲ ಕಳೆದುಕೊಂಡಿದ್ದ ಅಧಿಕಾರ ಬಿಜೆಪಿಗೆ ಪುನಃ ಲಭ್ಯವಾಗಿದ್ದು, ಅಧಿಕಾರವಿಲ್ಲದ ನೋವು ಕಾರ್ಯಕರ್ತರಲ್ಲಿತ್ತು. ಆದರೆ ಕೋರ್ಟ್ ಮೂಲಕ ಸತ್ಯಕ್ಕೆ ಜಯ ದೊರೆತಿದ್ದು, ಜೀವರಾಜ್ ಅವರು ಕ್ಷೇತ್ರದ ನಿಜವಾದ ಶಾಸಕರು ಎಂದು ಸಾಬೀತಾಗಿದೆ. ಜೀವರಾಜ್ ಅವರು ಹಿಂದೆ ನಡೆಸಿದ ಅಭಿವೃದ್ಧಿ ಕಾರ್ಯಗಳಿಗಾಗಿ ಜನರು ಆಶೀರ್ವಾದ ಮಾಡಿದ್ದಾರೆ ಎಂದರು.

ಬಿಜೆಪಿ ಮುಖಂಡ ಕೆ.ಟಿ.ವೆಂಕಟೇಶ್, ತಾಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರಭಾಕರ್‌ಪ್ರಣಸ್ವಿ, ಬಿಜೆಪಿ ಮುಖಂಡರಾದ ಪ್ರದೀಪ್ ಕಿಚ್ಚಬ್ಬಿ, ರಮೇಶ್ ಗಡಿಗೇಶ್ವರ, ಸುಚಿತಾ ಉಚಿತ್ ಹೆಗ್ಡೆ, ಕೋಕಿಲಮ್ಮ, ಮಧುರಾರಾಜಪ್ಪಗೌಡ,ಪವಿತ್ರಾಸುಂದರೇಶ್, ದಿನಕರ್, ನಾರಾಯಣ, ಮಂಜು ಹೊಳೆಬಾಗಿಲು, ಅಶ್ರಫ್,ಎ.ಸಿ.ಕೃಷ್ಣಮೂರ್ತಿ, ಸುಜಿತ್ ಬನ್ನೂರು, ಚಂದ್ರಶೇಖರ್, ರಾಜಪ್ಪಗೌಡ ಮತ್ತಿತರರು ಹಾಜರಿದ್ದರು.

ರಾಜೇಗೌಡ ಕೇರಾಫ್ ಬಾಸಾಪುರ... ಜೀವರಾಜ್ ದ್ವಾರಮಕ್ಕಿ ಟು ವಿಧಾನಸೌಧ

ವಿಜಯೋತ್ಸವ ಆಚರಣೆ ವೇಳೆಯಲ್ಲಿ ಬಿಜೆಪಿ ಪಕ್ಷ ಹಾಗೂ ಪಕ್ಷದ ಮುಖಂಡರ ಪರ ಘೋಷಣೆಗಳನ್ನು ಕಾರ್ಯಕರ್ತರು ಕೂಗುವುದರೊಂದಿಗೆ, ಇತ್ತೀಚೆಗೆ ಕಾಂಗ್ರೆಸ್ ಮುಖಂಡರೊಬ್ಬರು ಜೀವರಾಜ್ ಅವರನ್ನು ಉದ್ದೇಶಿಸಿ, ಜೀವರಾಜ್ ಇನ್ನು ಕೇರಾಫ್ ದ್ವಾರಮಕ್ಕಿ. ಅವರಿಗೆ ಯಾವುದೇ ಅಧಿಕಾರ ದೊರೆಯಲ್ಲ ಎಂದು ಭಾಷಣದಲ್ಲಿ ಹೇಳಿದ್ದರು. ಅದಕ್ಕೆ ಪ್ರತಿಯಾಗಿ ಘೋಷಣೆ ಕೂಗಿದ ಬಿಜೆಪಿ ಕಾರ್ಯಕರ್ತರು, ರಾಜೇಗೌಡ ಕೇರಾಫ್ ಬಾಸಾಪುರ.. ಜೀವರಾಜ್ ದ್ವಾರಮಕ್ಕಿ ಟು ವಿಧಾನಸೌಧ. ಪುಕ್ಸಟ್ಟೆ.. ಪುಕ್ಸಟ್ಟೆ..ಮೂರು ವರ್ಷ ಪುಕ್ಸಟ್ಟೆ ಎಂದು ಘೋಷಣೆ ಕೂಗಿ ಅಣಕ ಮಾಡಿದರು.

ಸುದ್ದಿ ಸಿಂಚನ

ಪಂಚ ರಾಜ್ಯಗಳ ಚುನಾವಣೆ ರಿಸಲ್ಟ್: ಬಿಜೆಪಿ ಕಾರ್ಯಕರ್ತರ ಸಂಭ್ರಮ

ಚಿಕ್ಕಮಗಳೂರು: ಪಂಚ ರಾಜ್ಯಗಳ ಫಲಿತಾಂಶ ಹೊರ ಬಂದಿದ್ದು ಪಶ್ಚಿಮ ಬಂಗಾಳ, ಪಾಂಡಿಚೇರಿ, ಅಸ್ಸಾಂನಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಮೂಡಿಗೆರೆ ತಾಲೂಕು ಬಿಜೆಪಿ ಕಾರ್ಯಕರ್ತರು ಪಟ್ಟಣದ ಹೃದಯ ಭಾಗವಾದ ಲಯನ್ಸ್ ವೃತ್ತದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಉಪಸಭಾಪತಿ ಎಂ.ಕೆ.ಪ್ರಾಣೇಶ್ ಮಾತನಾಡಿ, ಪಂಚರಾಜ್ಯಗಳ ಚುನಾವಣೆಯಲ್ಲಿ ಅಸ್ಸಾಂ, ಪಾಂಡಿಚೇರಿ, ವಿಶೇಷವಾಗಿ ಪಶ್ಚಿಮ ಬಂಗಾಳನಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದ್ದು, ಈ ಗೆಲುವಿನ ಗಾಳಿ ರಾಜ್ಯಕ್ಕೂ ಬೀಸಲಿದೆ. ಇದು ದೇಶದ ಕಾರ್ಯಕರ್ತರ ಗೆಲುವಾಗಿದೆ. ರಾಜ್ಯದ ಮೇಲು ಈ ಗಾಳಿ ಬೀಸಲಿದೆ. ಈ ಫಲಿತಾಂಶ ಗಮನಿಸಿದರೆ, ಇಡೀ ದೇಶ ಬಿಜೆಪಿ ಪರವಾಗಿದೆ ಎಂದರು. ಕ್ಷೇತ್ರಾಧ್ಯಕ್ಷ ಗಜೇಂದ್ರ ಟಿ.ಎಂ. ಮಾತನಾಡಿದರು. ಜೆ.ಎಸ್.ರಘು. ವಕೀಲ ಸಿದ್ದಯ್ಯ, ಪರೀಕ್ಷಿತ್ ಜಾವಳಿ, ವಿಕ್ರಮ್ ಬಣಕಲ್, ಭರತ್ ಬಾಳೂರು, ಪ್ರಮೋದ್ ದುಂಡಿಗ, ಮನೋಜ್ ಹಳೆಕೋಟೆ, ಪಂಚಾಕ್ಷರಿ, ಸಂದೀಪ್, ಯತೀಶ್, ಸುನೀಲ್ ಮಣ್ಣೀಕೆರೆ, ಭರತ್ ವಾಲಕರಟ್ಟಿ, ಅವಿನಾಶ್, ಧನಿಕ್, ಲೋಕೇಶ್, ಸಚ್ಚಿನ್ ಬಾನಳ್ಳಿ ಇದ್ದರು.

ಶ್ರದ್ಧಾಭಕ್ತಿಯ ಬೂದಿಬಸವೇಶ್ವರ ಸ್ವಾಮಿ ಕೆಂಡಾರ್ಚನೆ

ತರೀಕೆರೆ: ತಾಲೂಕಿನ ಬೇಲೇನಹಳ್ಳಿ ಗ್ರಾಮದ ಬೂದಿ ಬಸವೇಶ್ವರ ಸ್ವಾಮಿ ಕೆಂಡಾರ್ಚನೆ ಸಡಗರ ಸಂಭ್ರಮದ ಜತೆಗೆ ಶ್ರದ್ಧಾ ಭಕ್ತಿಯಿಂದ ನಡೆಯಿತು. ಮಂಗಳವಾರ ಬೆಳಗಿನ ಜಾವ 3 ಗಂಟೆ ಬ್ರಾಹ್ಮಿ ಮಹೂರ್ತದಲ್ಲಿ ಗಂಗಾಪೂಜೆ, ಗಣಪತಿ ಅವಾಹನೆ, ಸ್ವಸ್ತಿ ಪುಣ್ಯ ಕೆಂಡದ ಗುಂಡಿಗೆ ಅಗ್ನಿ ಸ್ಪರ್ಶದ ಜತೆಗೆ ಕಳಶ ಸ್ಥಾಪನೆ ಮತ್ತು ರುದ್ರಾಭಿಷೇಕ ಸೇರಿದಂತೆ ಅಷ್ಟೋತ್ತರ ನಾಮ ಪೂಜೆಗಳು ನಡೆದವು. ಬೆಳಿಗ್ಗೆ 8.45 ರಿಂದ 10.55ರ ವರೆಗಿನ ಮಿಥುನ ಲಗ್ನದಲ್ಲಿ ಭಕ್ತ ವೃಂದದೊಂದಿಗೆ ದೇವರನ್ನು ನಡೆಮುಡಿಯೊಂದಿಗೆ ಕೆಂಡದ ಗುಂಡಿಯ ಬಳಿ ಕರೆತರಲಾಯಿತು. ಬಳಿಕ ಗಣಪತಿ ಪೂಜೆ ನಂತರ ಕೆಂಡಾರ್ಚನೆ ನಡೆಯಿತು. ಭಕ್ತರು ಕೆಂಡವನ್ನು ತುಳಿದು ಪುನೀತರಾದರು. ಬಳಿಕ ಅನ್ನಸಂತರ್ಪಣೆ ನಡೆಯಿತು. ರಾತ್ರಿ ದೇವರ ಅಡ್ಡಪಲ್ಲಕ್ಕಿ ಉತ್ಸವ ಗ್ರಾಮದಲ್ಲಿ ಅ್ಧೂರಿಯಾಗಿ ನಡೆಯಿತು.

ಅರಣ್ಯ ಇಲಾಖೆ ಎಸಿಎಫ್ ಮನೆ ಮುಂದೆ ವಾಮಾಚಾರ ಶಂಕೆ!

ಬಾಳೆಹೊನ್ನೂರು: ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ ತಾಲೂಕಿನ ಬಾಳೆಹೊನ್ನೂರು ಅರಣ್ಯ ಇಲಾಖೆಯ ಎಸಿಎಫ್ (ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ) ಅವರ ಸರ್ಕಾರಿ ಮನೆಯ ಮುಂದೆ ವಾಮಾಚಾರ ಮಾಡಿರುವ ಘಟನೆ ನಡೆದಿದ್ದು, ಅರಣ್ಯ ಇಲಾಖೆಯ ಅಧಿಕಾರಿಗಳಲ್ಲಿ ಭಯ ಮೂಡಿಸಿದೆ.



ಬಾಳೆಹೊನ್ನೂರು ಎಸಿಎಫ್ ಮೋಹನ್ ಕುಮಾರ್‌ಮತ್ತು ಅವರ ಜೀಪು ಚಾಲಕನನ್ನು ಗುರಿಯಾಗಿಸಿಕೊಂಡು ವಾಮಾಚಾರ ಕೃತ್ಯ ನಡೆಸಿದ್ದಾರೆ ಎನ್ನುವ ಶಂಕೆ ಮೂಡಿದ್ದು, ಈ ಘಟನೆಯಿಂದಾಗಿ ಅರಣ್ಯ ಇಲಾಖೆಯ ಸಿಬ್ಬಂದಿ ಭಯಗೊಂಡಿದ್ದಾರೆ. ಎಸಿಎಫ್ ಮೋಹನ್ ಸರ್ಕಾರಿ ಮನೆಯ ಮುಂದೆ ಅನಾಮಧೇಯ ವ್ಯಕ್ತಿಗಳು ವಾಮಾಚಾರ ನಡೆಸಿದ್ದು, ಎಸಿಎಫ್ ಹಾಗೂ ಅವರ ಜೀಪು ಚಾಲಕನ ಫೋಟೋಗಳನ್ನು ಮಡಿಕೆಯೊಳಗೆ ಇಟ್ಟು ಅರಿಶಿನ-ಕುಂಕುಮ ಎರಚಿ ಮಡಿಕೆಯನ್ನು ಒಡೆದು ಹಾಕಲಾಗಿದೆ. ಎಸಿಎಫ್ ಅವರು ಬೆಳಿಗ್ಗೆ ಮನೆಯಿಂದ ಹೊರ ಬಂದಾಗ ಈ ಘಟನೆ ಬೆಳಕಿಗೆ ಬಂದಿದ್ದು, ಇದರಿಂದಾಗಿ ಅವರ ಕುಟುಂಬ ಆತಂಕದಲ್ಲಿದೆ. ಈ ವಾಮಾಚಾರದ ಹಿಂದೆ ಕಚೇರಿಯ ಸಿಬ್ಬಂದಿಯೇ ಇರುವ ಸಾಧ್ಯತೆಯಿದೆ ಎಂದು ಎಸಿಎಫ್ ಮೋಹನ್‌ಕುಮಾರ್‌ಅನುಮಾನ ವ್ಯಕ್ತಪಡಿಸಿದ್ದು, ಈ ಕುರಿತು ಬಾಳೆಹೊನ್ನೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಇಲಾಖೆಯೊಳಗಿನ ವೃತ್ತಿ ವೈಷಮ್ಯ ಅಥವಾ ವರ್ಗಾವಣೆ ವಿಚಾರವಾಗಿ ಈ ಕೃತ್ಯ ನಡೆದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ವಾಮಾಚಾರ ನಡೆಸಿದ ಕಿಡಿಗೇಡಿಗಳ ಪತ್ತೆಗೆ ಬಲೆ ಬೀಸಿದ್ದಾರೆ.



ಚಿಕ್ಕಮಗಳೂರಿನ ಮೂಡಿಗೆರೆ ಬಿಜೆಪಿ ಕಾರ್ಯಕರ್ತರು ಲಯನ್ಸ್ ವೃತ್ತದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಕ್ಷೇತ್ರಾಧ್ಯಕ್ಷ ಗಜೇಂದ್ರ, ರಘು. ವಕೀಲ ಸಿದ್ದಯ್ಯ, ಪರೀಕ್ಷಿತ್ ಜಾವಳಿ, ವಿಕ್ರಮ್ ಬಣಕಲ್, ಭರತ್, ಪ್ರಮೋದ್ ದುಂಡಿಗ ಇತರರು ಇದ್ದರು.



ಬಾಳೆಹೊನ್ನೂರಿನ ಗ್ರಾಪಂನ ಡಿಜಿಟಲ್ ಗ್ರಂಥಾಲಯ, ಅರಿವು ಕೇಂದ್ರಕ್ಕೆ ವಿವಿಧ ಪುಸ್ತಕಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಚೈತನ್ಯ ವೆಂಕಿ, ಇಬ್ರಾಹಿಂ ಶಾಫಿ, ಆರ್ಯನ್ ತೇಜಸ್, ಎಚ್.ಗೋಪಾಲ್, ಸುಧಾಕರ್, ಶಶಿಧರ್, ರಾಮಪ್ಪ ಲಕ್ಷ್ಮಿ, ಉಷಾ ಇತರರು ಇದ್ದರು.



ಕಡೂರು ತಾಲೂಕಿನ ಮತಿಘಟ್ಟ ಕೃಷಿ ಸಹಕಾರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಕುಶಕುಮಾರ್‌ಅವರನ್ನು ಅಭಿನಂದಿಸಲಾಯಿತು. ಸಿ.ಪಿ.ಪ್ರಕಾಶ್, ಜಿಗಣೇಹಳ್ಳಿ ನೀಲಕಂಠಪ್ಪ, ಬಸವರಾಜಪ್ಪ, ಗಂಗಮ್ಮ, ಈಶ್ವರಪ್ಪ, ನಟರಾಜ್, ಸುರೇಶ್, ಪವನ್ ಇತರರು ಇದ್ದರು.

ಅಂಚೆ ಮತ ಗೊಂದಲ: ಆಯೋಗಕ್ಕೆ ವೀಕ್ಷಕರ ವರದಿ

2023ರ ಚುನಾವಣೆಯ ಅಂಚೆ ಮತ ಎಣಿಕೆ ಕಾರ್ಯದ ಲೋಪ ತನಿಖೆಗೆ ಆಗ್ರಹ | ಆಯೋಗಕ್ಕೆ ವಿಡಿಯೋ ಸಲ್ಲಿಕೆ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತ ಮರು ಎಣಿಕೆ ಸಂದರ್ಭದಲ್ಲಿ 2023ರಲ್ಲಿ ಸಿಂಧುವಾಗಿದ್ದ ಮತಗಳು, ಮರು ಎಣಿಕೆಯಲ್ಲಿ ಅಸಿಂಧು ಆಗಿರುವುದು ಹಾಗೂ ಅಂಚೆ ಮತ ಇವಿಎಂ ಮತ ಎಣಿಕೆ ಆರಂಭಕ್ಕೂ ಮುನ್ನ ನಡೆಸಬೇಕು. ಆದರೆ, ಇವಿಎಂ ಎಣಿಕೆ ಬಳಿಕ ಯಾಕೆ ಅಂಚೆ ಮತ ಎಣಿಕೆ ಮಾಡಲಾಗಿದೆ ಎನ್ನುವ ಕುರಿತು ಮರು ಎಣಿಕಾ ಕೇಂದ್ರದ ವೀಕ್ಷಕರು ಇದೀಗ ಚುನಾವಣಾ ಆಯೋಗಕ್ಕೆ ವರದಿ ಸಲ್ಲಿಸಿದ್ದಾರೆಂದು ಮೂಲಗಳು ತಿಳಿಸಿವೆ.

ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಯ ಬಳಿಕ ಫಲಿತಾಂಶವೇ ಅದಲು ಬದಲಾಗಿದ್ದು, ದೇಶದ ಇತಿಹಾಸದಲ್ಲಿ ಇಂತಹದ್ದೊಂದು ಪ್ರಕರಣ ಮೊದಲಾಗಿದೆ. ಹೀಗಾಗಿ, ಸಾರ್ವಜನಿಕ ವಲಯದಲ್ಲಿ ಮತ್ತು ರಾಜಕೀಯ ವಲಯದಲ್ಲಿ ಸಾಕಷ್ಟು ಚರ್ಚೆಗೆ ಕಾರಣವಾಗಿದೆ.

ಈ ನಡುವೆ ಮೇ 2ರಂದು ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜಿನಲ್ಲಿ ನಡೆದ ಶೃಂಗೇರಿ ವಿಧಾನಸಭಾ ಕ್ಷೇತ್ರದ 1822 ಅಂಚೆ ಮತ ಮರು ಎಣಿಕೆ ಹಾಗೂ 2023ರಲ್ಲಿ ಅಸಿಂಧು ಮತಗಳು ಎಂದು ಪರಿಗಣಿಸಿದ 279 ಅಂಚೆಗಳ ಮರು ಪರಿಶೀಲನಾ ಕಾರ್ಯಕ್ಕೆ ಚುನಾವಣಾ ಆಯೋಗದಿಂದ ನೇಮಕಗೊಂಡಿದ್ದ ಎಣಿಕಾ ಕೇಂದ್ರದ ವೀಕ್ಷಕರು ಇದೀಗ ಈ ಕುರಿತು ಸಂಪೂರ್ಣ ವರದಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಕೆ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವೀಕ್ಷಕರು ಸಲ್ಲಿಕೆ ಮಾಡಿದ ವರದಿಯಲ್ಲಿ ಅಂಚೆ ಮತಗಳ ಕುರಿತು ಸಾಕಷ್ಟು ಗೊಂದಲ ಉಂಟಾಗಿರುವ ಬಗ್ಗೆ, 2023ರ ಚುನಾವಣೆಯ ಎಣಿಕೆ ಕಾರ್ಯದ ಲೋಪದ ಬಗ್ಗೆ ಹಾಗೂ ಈ ಕುರಿತು ತನಿಖೆ ನಡೆಸಬೇಕೆಂಬ ಬಗ್ಗೆಯೂ ಉಲ್ಲೇಖಿಸಲಾಗಿದೆ ಎಂದು ಮೂಲಗಳು ಮಾಹಿತಿ ನೀಡಿವೆ.



ಚಿಕ್ಕಮಗಳೂರಿನ ಸಗನಿಪುರದ ಮತಯಂತ್ರಗಳ ಉಗ್ರಾಣ.



ನ್ಯಾಯಾಲಯದ ಆದೇಶದ ಅನ್ವಯ ಮರು ಮತ ಎಣಿಕೆ ಮಾಡಿದ್ದೇವೆ. ನ್ಯಾಯಲಯದ ಆದೇಶ ಇರುವಂತೆ ಮರು ಮತ ಎಣಿಕೆ ಮಾಡಿ ಫಲಿತಾಂಶವನ್ನು ಕೊಟ್ಟಿದ್ದೇವೆ. ಅಧಿಕಾರಿಗಳ ವಿರುದ್ಧ ಆರೋಪ, ಪ್ರತ್ಯಾರೋಪ ಸಹಜ. ಆದರೆ ಕಾನೂನು ಬದ್ಧವಾಗಿ ಕೆಲಸ ಮಾಡಿದ್ದೇವೆ.

• **ಎನ್.ಎಂ.ನಾಗರಾಜ್**
ಜಿಲ್ಲಾಧಿಕಾರಿ, ಚಿಕ್ಕಮಗಳೂರು

ಮೂರು ಹಂತದಲ್ಲಿ ಲೋಪ: ಮೊದಲನೇ ಹಂತದಲ್ಲಿ ಅಂಚೆ ಮತಗಳು ಎಣಿಕೆ ಆಗಬೇಕಾದ ನಿಯಮಾವಳಿಯ ಪ್ರಕಾರ ಎಣಿಕೆ ನಡೆದಿರುವುದಿಲ್ಲ. ಎರಡನೇಯದಾಗಿ ಅಸಿಂಧು ಗೊಂಡ ಮತಗಳಿಗೆ ನಿಖರವಾದ ಕಾರಣ ತಿಳಿಸಬೇಕಾಗಿತ್ತು. ಮೂರನೇಯದಾಗಿ ಗೆಲುವಿನ ಅಂತರವು ತಿರಸ್ಕೃತಗೊಂಡ ಮತಗಳ ಸಂಖ್ಯೆಗಿಂತ ಕಡಿಮೆ ಇರುವುದರಿಂದ 2023ರಲ್ಲಿ ಮತ ಎಣಿಕೆ ನಡೆದ ದಿನವೇ ಮರು ಎಣಿಕೆ ನಡೆಸಬೇಕಾಗಿತ್ತು ಎಂದು ವರದಿಯಲ್ಲಿ ತಿಳಿಸಲಾಗಿದೆ.

ವಿಡಿಯೋ ಚಿತ್ರಣ ಸೇರಿದ ಹಲವು ದಾಖಲೆ ಆಯೋಗಕ್ಕೆ: ಸಾಕಷ್ಟು ಗೊಂದಲ, ಚರ್ಚೆಗೆ ಎಡೆ ಮಾಡಿಕೊಟ್ಟಿರುವ ಹಿನ್ನೆಲೆಯಲ್ಲಿ ಚುನಾವಣಾ ಆಯೋಗವು 2023ರಲ್ಲಿ ಅಂಚೆ ಮತ ಮರು ಎಣಿಕೆ ವೇಳೆ ವಿಡಿಯೋ ಚಿತ್ರಣ ಹಾಗೂ ಇತರೆ ದಾಖಲಾತಿಗಳನ್ನು ಆಯೋಗಕ್ಕೆ ಸಲ್ಲಿಕೆ ಮಾಡಲಾಗಿದೆ. ಈ ಬಗ್ಗೆ ಆಯೋಗವು ತನಿಖೆ ನಡೆಸುವುದಕ್ಕೆ ಸಿದ್ಧತೆ ಸಹ ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿದು ಬಂದಿದೆ.

ನಾಪತ್ತೆ ಮತ, ಮತಗಳ ಅಸಿಂಧು ಹೇಗೆ ಹುಡುಕಾಟ: ಈ ನಡುವೆ ಸ್ಟ್ರಾಂಗ್ ರೂಂನಲ್ಲಿ ಸೀಲ್ ಮಾಡಿದ ಮತಗಳಲ್ಲಿ ಕೆಲವು ಮತಗಳು ನಾಪತ್ತೆ ಹೇಗೆ?, ಆ ಮತ ಎಲ್ಲಿ ಹೋದವು. ಜತೆಗೆ, 2023ರ ಮೇ 13 ರಂದು ಸಿಂಧು ಮತಗಳು ಎಂದು ಚುನಾವಣಾಧಿಕಾರಿ ಸೇರಿದಂತೆ ಎಲ್ಲ ಪಕ್ಷದ ಸದಸ್ಯರು ಸಹಿ ಮಾಡಿದ ಮತಗಳ ಪೈಕಿ ಬರೋಬ್ಬರಿ ಕಾಂಗ್ರೆಸ್ ಅಭ್ಯರ್ಥಿ ರಾಜೇಗೌಡ 255 ಅಂಚೆ ಮತ ಹಾಗೂ ಬಿಜೆಪಿ ಅಭ್ಯರ್ಥಿ ಜೀವರಾಜ್ ಲಭ್ಯವಾಗಿ 2 ಮತ ಹೇಗೆ ಈ ಡಬ್ಬಲ್ ಎಂಟ್ರಿ, ಮಲ್ಟಿಪಲ್ ಎಂಟ್ರಿ ಆಗುವ ಮೂಲಕ ಅಸಿಂಧು ಆಗುವುದಕ್ಕೆ ಸಾಧ್ಯ ಎಂಬುದರ ಬಗ್ಗೆ ಅಧಿಕಾರಿಗಳು ಹುಡುಕಾಟ, ಪರಿಶೀಲನೆ ಆರಂಭಿಸಿದ್ದಾರೆ.

2023ರಲ್ಲಿ ಸಿಂಧುವಾಗಿದ್ದು ಅಸಿಂಧು ಆಗಿದ್ದು ಹೇಗೆ?

ನರಸಿಂಹರಾಜಪುರ: 2023ರಲ್ಲಿ ಶೃಂಗೇರಿ ವಿಧಾನ ಸಭಾ ಕ್ಷೇತ್ರದ ಚುನಾವಣೆಯ ಮತ ಎಣಿಕೆಯಲ್ಲಿ ರಾಜೇಗೌಡರಿಗೆ ಬಿದ್ದಿದ್ದ 257 ಸಿಂದು ಅಂಚೆ ಮತಗಳು ಈಗ ಮರು ಎಣಿಕೆಯಲ್ಲಿ ಅಸಿಂದು ಆಗಿದ್ದು ಹೇಗೆ ? ರಾಜ್ಯ ಹಾಗೂ ಕೇಂದ್ರ ಚುನಾವಣಾ ಆಯೋಗವು ಉತ್ತರಿಸಬೇಕು ಎಂದು ತಾಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ರತನ್ ಗೌಡ ಅರಗಿ ಒತ್ತಾಯಿಸಿದರು.

2023ರಲ್ಲಿ ಅಂಚೆ ಮತ ಎಣಿಕೆಯಲ್ಲಿ ರಾಜೇಗೌಡರಿಗೆ 567 ಮತಗಳು ಬಿದ್ದಿದ್ದವು. ಈಗ ಮರು ಎಣಿಕೆಯಲ್ಲಿ 257 ಮತಗಳು ಅಸಿಂದು ಎಂದು ತಿರಸ್ಕೃತವಾಗಿದೆ. ಜೀವರಾಜ್ ಗೆದ್ದಿದ್ದಾರೆ ಎಂದು ಪ್ರಮಾಣ ಪತ್ರ ನೀಡಲಾಗುತ್ತಿದೆ. 2023 ರಲ್ಲಿ ಎಣಿಕೆಯಾಗುವಾಗ 12 ಅಭ್ಯರ್ಥಿಗಳ 24 ಏಜೆಂಟರು ಇರುತ್ತಾರೆ.ಬಿಜೆಪಿ ಹಾಗೂ ಜೆಡಿಎಸ್ ಪಕ್ಷದ ಏಜೆಂಟರು ಸಹ ಒಪ್ಪಿಗೆ ನೀಡಿ ಸಹಿ ಹಾಕಿದ್ದಾರೆ. ಆಗ ಪಾರದರ್ಶಕವಾಗಿ ಎಣಿಕೆಯಾಗಿರಲಿಲ್ಲವೇ ? ಪ್ರಸ್ತುತ ಗ್ರಾಮ ಪಂಚಾಯಿತಿ ಚುನಾವಣೆಯಲ್ಲೂ ಮತದಾರರು ಸರಿಯಾದ ರೀತಿಯಲ್ಲಿ ಮತ ನೀಡುತ್ತಾರೆ. ಅಂಚೆ ಮತ ನೀಡುವುವರು ವಿದ್ಯಾವಂತರೇ ಆಗಿರುತ್ತಾರೆ. ಈಗ ರಾಜೇಗೌಡರಿಗೆ ಬಿದ್ದ 257 ಮತ ತಿರಸ್ಕೃತ ಮತ ಎಂದು ಘೋಷಣೆ ಮಾಡಿರುವುದು ಮತ ದರೋಡೆಯಾಗಿದೆ ಎಂದು ಟೀಕಿಸಿದರು.



2023 ರಲ್ಲಿ ಬಿಗಿ ಭದ್ರತೆ ಇರುವ ಸ್ಟ್ರಾಂಗ್ ರೂಂನಲ್ಲಿ ಅಂಚೆ ಮತಗಳನ್ನು ಬಾಕ್ಸ್‌ಗೆ ಹಾಕಿ ಸೀಜ್ ಮಾಡಿ ಇಡಲಾಗಿತ್ತು. ಮೊನ್ನೆ ಮರು ಎಣಿಕೆಗೆ ತೆಗೆಯುವಾಗ 9 ಬಾಕ್ಸ್ ಓಪನ್ ಆಗಿತ್ತು. ರಾಜೇಗೌಡರ ಪರ ಏಜೆಂಟರಾಗಿದ್ದ ಸುದೀರ್‌ಕುಮಾರ್‌ಮುರೊಳ್ಳಿ ಆಕ್ಷೇಪಣೆ ಸಲ್ಲಿಸಿದ್ದಾರೆ. ಒಮ್ಮೆ ಸಿಂದು ಆಗಿದ್ದ ಮತಗಳು ಈಗ ಅಸಿಂದು ಎಂದು ಘೋಷಣೆ ಮಾಡಿರುವುದು ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ ಎಂದರು.

ಡಿ.ಎನ್.ಜೀವರಾಜ್ ಪ್ರಮಾಣ ವಚನ ಸ್ವೀಕಾರ ಮಾಡುವ ಮೊದಲೇ ಕೆಲವು ಬಿಜೆಪಿ ಕಾರ್ಯಕರ್ತರು ಎನ್.ಆರ್.ಪುರ ಶಾಸಕರ ಕಚೇರಿ ಸಮೀಪ ದಾಂದಲೆ ಮಾಡಿ ಘೋಷಣೆ ಕೂಗಿ ರಾಜೇಗೌಡರ ನಾಮ ಫಲಕವನ್ನು ಕಿತ್ತು ರಾಜೇಗೌಡರಿಗೆ ಅವಮಾನ ಮಾಡಿದ್ದಾರೆ ಎಂದರು.

ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಪಿ.ಅಭಿಲಾಶ್, ಎನ್.ಆರ್.ಪುರ ನಗರ ಘಟಕದ ಅಧ್ಯಕ್ಷ ವಿಜಯ, ಯುವ ಕಾಂಗ್ರೆಸ್ ಮುಖಂಡರಾದ ಸುಜಿತ್, ಪ್ರವೀಣ್ ಇದ್ದರು.

ಕಾಡಾನೆಗಳ ಹಾವಳಿ: ಮಾವು, ಅಡಕೆ, ತೆಂಗು ಮರಗಳ ನಾಶ

ಬಳ್ಳಾವರ, ಗಂಗೂರು ಸುತ್ತಮುತ್ತ ಗಜಗಳ ಉಪಟಳ

• **ಕನ್ನಡಪ್ರಭ ವಾರ್ತೆ** ತರೀಕೆರೆ

ತಾಲೂಕಿನ ಲಿಂಗದಹಳ್ಳಿ ಹೋಬಳಿ ಬಳ್ಳಾವರ, ಗಂಗೂರು ಗ್ರಾಮಗಳ ಸುತ್ತಮುತ್ತ ಪದೇ ಪದೇ ನಿರಂತರವಾಗಿ ಕಾಡಾನೆಗಳು ರೈತರ ತೋಟಗಳಿಗೆ ನುಗ್ಗಿ ಫಸಲು ಬಿಡುತ್ತಿದ್ದ ಮಾವು, ಅಡಕೆ, ತೆಂಗಿನ ಮರಗಳನ್ನು ಮನಸೋ ಇಚ್ಚೆ ತುಳಿದು ಮುರಿದು ಬೆಳೆಗಳನ್ನು ನಾಶ ಮಾಡುತ್ತಿದ್ದು ಅರಣ್ಯ ಇಲಾಖೆ ಕೂಡಲೇ ಕಾಡಾನೆಗಳನ್ನು ಜಮೀನುಗಳಿಗೆ ಬಾರದಂತೆ ಕ್ರಮ ವಹಿಸಬೇಕೆಂದು ಚಿಕ್ಕಮಗಳೂರು ಜಿಲ್ಲಾ ಗ್ಯಾರಂಟಿ ಅನುಷ್ಠಾನ ಉಸ್ತುವಾರಿ ಪ್ರಾಧಿಕಾರ ಜಿಲ್ಲಾ ಉಪಾಧ್ಯಕ್ಷ ಸಮೀವುಲ್ಲಾ ಷರೀಫ್ ಒತ್ತಾಯಿಸಿದ್ದಾರೆ.



ಭಾನುವಾರ ಮತ್ತು ಸೋಮವಾರ ಸಮೀಊಪದ ಕಾಡಿನಿಂದ ಎರಡು ಆನೆಗಳು ತೋಟಗಳಿಗೆ ಸಾಯಂಕಾಲ 6 ಗಂಟೆ ಸಮಯದಲ್ಲೇ ಬಳ್ಳಾವರ ಗಂಗೂರು ಗ್ರಾಮದ ಸ.ನಂ.55 ಮತ್ತು 56, 72, ಮತ್ತು 73 ತೋಟಗಳಿಗೆ ಕಾಡಾನೆ ನುಗ್ಗಿ ಫಸಲು ಬಿಡುತ್ತಿದ್ದ ಮಾವಿನ ಮರಗಳನ್ನು ಬುಡ ಸಹಿತ ಮುರಿದು ಹಾಕಿದೆ, ಅಡಕೆ, ತೆಂಗಿನ ಮರಗಳನ್ನು ಕೂಡ ಮುರಿದು ನಾಶ ಪಡಿಸಿದೆ, ಅಲ್ಲದೆ ತೋಟದಲ್ಲಿ ಕೆಲಸ ಮಾಡುತ್ತಿದ್ದವರನ್ನು ಅಟ್ಟಿಸಿಕೊಂಡು ಬಂದಿದೆ, ತೋಟದಲ್ಲಿದ್ದ ಡ್ರಿಪ್, ಪೈಪುಗಳನ್ನು, ವಾಲ್ವ್.ಗಳನ್ನು ಮುರಿದು ಹಾಕಿದೆ ಎಂದು ತಿಳಿಸಿದ್ದಾರೆ.

ಕಾಡಾನೆಗಳು ನಿರಂತರವಾಗಿ ತೋಟಗಳಿಗೆ ನುಗ್ಗಿ ಬೆಳೆಗಳನ್ನು ನಾಶ ಪಡಿಸುತ್ತಿರುವುದರಿಂದ ಜನರು ಭಯಭೀತರಾಗಿದ್ದಾರೆ, ಗಂಗೂರು ಬಳ್ಳಾವರ ಬಳಿ ಆನೆಗಳು ನುಗ್ಗಿ ಬಾರದಂತೆ ಕಾಡಿನ ಅಂಚಿನಲ್ಲಿ ಕಂದಕ ತೋಡುವ ಕಾಮಗಾರಿ ಕಾರ್ಯ ಅರ್ಧಕ್ಕೆ ನಿಂತಿರುವುದರಿಂದ ಸಮೀಪದ ಕಾಡಿನಿಂದ ಆನೆಗಳು ಸುಲಭವಾಗಿ ದಾಟಿ ಬಂದು ರೈತರ ಜಮೀನು ತೋಟಗಳಿಗೆ ನುಗ್ಗಿ ಬೆಳೆ ನಾಶ ಪಡಿಸುತ್ತಿದ್ದು ರೈತರಿಗೆ ಅಪಾರ ನಷ್ಟ ಉಂಟುಮಾಡುತ್ತಿದೆ ಎಂದು ತಿಳಿಸಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳು ಕೂಡಲೇ ಗಮನ ಹರಿಸಿ ಆನೆಗಳು ಕಾಡಿನಿಂದ ದಾಟಿ ಬರದಂತೆ ದೊಡ್ಡ ಕಂದಕಗಳನ್ನು ತೋಡುವ ಕಾಮಗಾರಿಯನ್ನು ಕೂಡಲೇ ಕೈಗೊಳ್ಳುವಂತೆ ಒತ್ತಾಯ ಮಾಡಿದ್ದಾರೆ.

ಬಾಲ್ಯವಿವಾಹ ನಡೆದರೆ ಪೋಕ್ಸೋ ಕೇಸ್ ದಾಖಲಿಸಿ: ತಹಸೀಲ್ದಾರ್ ರೇಶ್ಮಾ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಬಾಲ್ಯ ವಿವಾಹಕ್ಕೆ ನಿಷೇಧವಿದ್ದರೂ, ರಹಸ್ಯವಾಗಿ ಅಪ್ರಾಪ್ತರ ಮದುವೆ ನಡೆದರೆ ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಿಸುವಂತೆ ಚಿಕ್ಕಮಗಳೂರು ತಹಸೀಲ್ದಾರ್‌ರೇಶ್ಮಾ ಸೂಚಿಸಿದ್ದಾರೆ.

ತಾಲೂಕು ಕಚೇರಿ ಸಭಾಂಗಣದಲ್ಲಿ ಮಂಗಳವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಅನುಷ್ಠಾನಗೊಳ್ಳುತ್ತಿರುವ ವಿವಿಧ ಯೋಜನೆಗಳ ತಾಲೂಕು ಮಟ್ಟದ ಸಮನ್ವಯ ಸಮಿತಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದರು.

21 ವರ್ಷದೊಳಗಿನ ಗಂಡು ಅಥವಾ 18 ವರ್ಷದೊಳಗಿನ ಹೆಣ್ಣಿನ ಮದುವೆಗೆ ಬಾಲ್ಯ ವಿವಾಹ ನಿಷೇಧ ಕಾಯಿದೆ ಅನ್ವಯವಾಗಲಿದ್ದು, ಅಂತಹ ಮದುವೆಗೆ ಕಾನೂನಿನಲ್ಲಿ ಅವಕಾಶವಿಲ್ಲ. ಬಾಲ್ಯ ವಿವಾಹ ನಡೆದರೆ, ಅಂತಹವರ ವಿರುದ್ಧ ಬಾಲ್ಯವಿವಾಹ ನಿಷೇಧ ಕಾಯಿದೆಯೊಂದಿಗೆ ಲೈಂಗಿಕ ದೌರ್ಜನ್ಯ ಪೋಕ್ಸೋ ಕಾಯಿದೆಯಡಿಲ್ಲಿಯೂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲು ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ.

ಪ್ರಧಾನಮಂತ್ರಿ ಮಾತೃವಂದನಾ ಯೋಜನೆಯಡಿ ಮೊದಲನೆಯ ಮಗುವಿಗೆ 5 ಸಾವಿರ ರು. ಸಹಾಯಧನ ನೀಡಲಾಗುತ್ತಿದೆ. 2ನೇ ಮಗುವು ಹೆಣ್ಣು ಮಗುವಾಗಿದ್ದಲ್ಲಿ 6 ಸಾವಿರ ರು. ಸಹಾಯಧನ ನೀಡಲಾಗುತ್ತದೆ. ಚಿಕ್ಕಮಗಳೂರು ತಾಲೂಕಿನಲ್ಲಿ 1182 ಫಲಾನುಭವಿಗಳಿಗೆ ಈ ಯೋಜನೆಯಡಿ ನೋಂದಾಯಿಸಲಾಗಿದ್ದು, ಗುರಿ ಮೀರಿದ ಸಾಧನೆಯಾಗಿದೆ.2025-26ನೇ ಸಾಲಿನಲ್ಲಿ ಒಟ್ಟು 29.16 ಲಕ್ಷ ರು. ಪಾವತಿಸಲಾಗಿದೆ ಎಂದು ಸಭೆಗೆ ಸಿಡಿಪಿಒ ಮಾಹಿತಿ ನೀಡಿದರು.

ಭಾಗ್ಯಲಕ್ಷ್ಮಿ ಯೋಜನೆಯಡಿ 2006-08ರಲ್ಲಿ ನೋಂದಾಯಿಸಿದ ಫಲಾನುಭವಿಗಳಿಗೆ ಈಗಾಗಲೇ ಪರಿಪಕ್ವ ಮೊತ್ತವನ್ನು ಪಾವತಿಸಲಾಗಿದೆ. ಆದರೆ, ಬಾಲ್ಯ ವಿವಾಹ, ಮರಣ ಸೇರಿದಂತೆ ವಿವಿಧ ಕಾರಣಗಳಿಂದ 92 ಮಂದಿ ಇದರಲ್ಲಿ ಅನರ್ಹರಾಗಿದ್ದಾರೆ. ಪ್ರಸ್ತುತ ಭಾಗ್ಯಲಕ್ಷ್ಮಿ-ಸುಕನ್ಯ ಸಮೃದ್ಧಿ ಖಾತೆ ಯೋಜನೆಯಡಿ ಈ ನೆರವು ನೀಡಲಾಗುತ್ತಿದ್ದು, ಬಿಪಿಎಲ್ ಕುಟುಂಬದ ಅರ್ಹ 2 ಹೆಣ್ಣುಮಕ್ಕಳಿಗೆ 15 ವರ್ಷಗಳವರೆಗೆ ಒಟ್ಟು 45 ಸಾವಿರ ರು. ಅಂಚೆ ಇಲಾಖೆಯಲ್ಲಿ ಠೇವಣಿ ಮಾಡಲಾಗಿದೆ ಎಂದರು.

ಚಿಕ್ಕಮಗಳೂರು ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ರಂಗನಾಥ್, ತಾ.ಪಂ. ಕಾರ್ಯನಿರ್ವಹಣಾಧಿಕಾರಿ ವಿಜಯಕುಮಾರ್, ವಿವಿಧ ಇಲಾಖಾಧಿಕಾರಿಗಳು ಹಾಜರಿದ್ದರು.



ಜಿಲ್ಲೆಯಲ್ಲಿ ಸಮನ್ವಯ ಸಮಿತಿಗಳ ಪ್ರಗತಿ ಪರಿಶೀಲನಾ ಸಭೆ.

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ವಿವಿಧ ಯೋಜನೆಗಳ ತಾಲೂಕು ಮಟ್ಟದ ಸಮನ್ವಯ ಸಮಿತಿಗಳ ಪ್ರಗತಿ ಪರಿಶೀಲನಾ ಸಭೆ.
- ಪ್ರಧಾನಮಂತ್ರಿ ಮಾತೃವಂದನಾ ಯೋಜನೆಯಡಿ ಮೊದಲನೆಯ ಮಗುವಿಗೆ 5 ಸಾವಿರ ರು. ಸಹಾಯಧನ

ಪುಸ್ತಕಗಳಿಂದ ವಿಶ್ವ ಜ್ಞಾನ ಲಭ್ಯ: ವೆಂಕಿ

ಬಾಳೆಹೊನ್ನೂರು: ಪುಸ್ತಕಗಳು ಜ್ಞಾನಾರ್ಜನೆಗೆ ಪೂರಕವಾಗಿದ್ದು, ಪುಸ್ತಕಗಳಿಂದ ವಿಶ್ವಜ್ಞಾನ ಲಭ್ಯ ಎಂದು ತಾಲ್ಲೂಕು ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಚೈತನ್ಯ ವೆಂಕಿ ಹೇಳಿದರು. ಪಟ್ಟಣದ ಗ್ರಾಪಂನ ಡಿಜಿಟಲ್ ಗ್ರಂಥಾಲಯ ಮತ್ತು ಅರಿವು ಕೇಂದ್ರಕ್ಕೆ ಜ್ಯೂನಿಯರ್ ಜೇಸಿ ಮಾಜಿ ಅಧ್ಯಕ್ಷ ಆರ್ಯನ್ ತೇಜಸ್ ಹುಟ್ಟು ಹಬ್ಬದ ಅಂಗವಾಗಿ ವಿವಿಧ ಪುಸ್ತಕಗಳನ್ನು ವಿತರಿಸಿ ಮಾತನಾಡಿದರು. ಜೇಸಿಐ ನಿಕಟಪೂರ್ವ ಅಧ್ಯಕ್ಷ ಇಬ್ರಾಹಿಂ ಶಾಫಿ, ಆರ್ಯನ್ ತೇಜಸ್, ಎಚ್.ಗೋಪಾಲ್, ಸುಧಾಕರ್, ಎನ್.ಶಶಿಧರ್, ಯಜ್ಞಪುರುಷಭಟ್, ರಾಮಪ್ಪ, ಲಕ್ಷ್ಮಿ, ಉಷಾ ಇದ್ದರು.

ಉದ್ಯೋಗ ನೋಂದಣಿ ಶಿಬಿರ ನಾಳೆ

ಬಾಳೆಹೊನ್ನೂರು: ಚಿಕ್ಕಮಗಳೂರು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ರೇಣುಕನಗರದ ಶ್ರೀ ಜಗದ್ಗುರು ರೇಣುಕಾಚಾರ್ಯ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಉದ್ಯೋಗ ನೋಂದಣಿ ಶಿಬಿರವನ್ನು ಮೇ.7ರಂದು ಆಯೋಜಿಸಲಾಗಿದೆ ಎಂದು ಪ್ರಾಚಾರ್ಯ ಎಚ್.ಆರ್.ಆನಂದ್ ತಿಳಿಸಿದ್ದಾರೆ. ಎಸ್ಸೆಸ್ಸೆಲ್ಸಿ ಅಥವಾ ಹೆಚ್ಚಿನ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಉಚಿತವಾಗಿ ಉದ್ಯೋಗ ನೋಂದಣಿ ಮಾಡಿಸಬಹುದಾಗಿದೆ. ನೋಂದಣಿಗಾಗಿ ವಿದ್ಯಾರ್ಹತೆಯ ಅಂಕಪಟ್ಟಿಗಳ ಮೂಲ ಹಾಗೂ ಜೆರಾಕ್ಸ್ ಪ್ರತಿ, ಜಾತಿ, ಆದಾಯ ಪ್ರಮಾಣ ಪತ್ರದ ಮೂಲ ಹಾಗೂ ಜೆರಾಕ್ಸ್ ಪ್ರತಿ, ಆಧಾರ್‌ಕಾರ್ಡ್ ಜೆರಾಕ್ಸ್ ಹಾಗೂ ಮೂಲ ಪ್ರತಿ, ಪಾಸ್ ಪೋರ್ಟ್ ಅಳತೆಯ 2 ಭಾವಚಿತ್ರಗಳನ್ನು ತರಲು ಕೋರಿದೆ.

ಬಾಲಕಿ ನಾಪತ್ತೆ: ಪ್ರಕರಣ ದಾಖಲು

ಕಡೂರು: ಪೊಲೀಸ್ ಠಾಣೆ ವ್ಯಾಪ್ತಿಯ ಲಕ್ಷೀಪುರ ಗ್ರಾಮದಲ್ಲಿ ಬಾಲಕಿಯೋರ್ವರು ನಾಪತ್ತೆ ಆಗಿರುವ ಪ್ರಕರಣ ನಡೆದಿದೆ. ಗ್ರಾಮದ ಸುಧಾಕರ ಎಂಬುವರ ಮಗಳು, ಮೇ 2ರಂದು ಬೆಳಗ್ಗೆ 6 ಗಂಟೆಗೆ ಎಂದಿನಂತೆ ಸುಧಾಕರ್‌ಮತ್ತು ಆತನ ಪತ್ನಿ ಕೆಲಸಕ್ಕೆ ಹೋಗಿ ಸಂಜೆ ವಾಪಸ್ ಬಂದಾಗ ಮಗಳು ಇರಲಿಲ್ಲ. ಎಲ್ಲೆಡೆ ಹುಡುಕಿದರೂ ಮಗಳು ಸಿಗದ ಕಾರಣ ಸುಧಾಕರ್ ಕಾಣೆಯಾಗಿರುವ ನನ್ನ ಮಗಳನ್ನು ಹುಡುಕಿಕೊಡಬೇಕೆಂದು ಕಡೂರು ಪೋಲೀಸರಿಗೆ ದೂರು ನೀಡಿದ್ದು ದೂರನ್ನು ಕಡೂರು ಪೋಲೀಸರು ಸ್ವೀಕರಿಸಿ ಪ್ರಕರಣ ದಾಖಲಿಸಿದ್ದಾರೆ.

ಮೇ 8ರಿಂದ ತಜ್ಞ ವೈದ್ಯರ ಸಮ್ಮೇಳನ

ಡಾ.ಪೃಥ್ವಿ ಮಾಹಿತಿ | ಕಾಪಿಕಾನ್–2026 | 10ರವರೆಗೆ ಕಾರ್ಯಕ್ರಮ | ಉಪನ್ಯಾಸ, ಚರ್ಚೆ, ಕಾರ್ಯಾಗಾರ

• **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ಶಿವಮೊಗ್ಗ ವೈದ್ಯಕೀಯ ಮಹಾವಿದ್ಯಾಲಯ ಎ.ಪಿ.ಐ.(ಅಸೋಸಿಯೇಷನ್ ಆಫ್ ಫಿಜಿಶಿಯನ್ಸ್ ಆಫ್ ಇಂಡಿಯಾ) ಸಹ್ಯಾದ್ರಿ ಶಾಖೆಯಿಂದ ಮೇ 8ರಿಂದ 10ರವರೆಗೆ ರಾಜ್ಯಮಟ್ಟದ ತಜ್ಞ ವೈದ್ಯರ ಸಮ್ಮೇಳನ, ಕಾಪಿಕಾನ್–2026 ಆಯೋಜಿಸಲಾಗಿದೆ ಎಂದು ಸಮ್ಮೇಳನದ ಸಂಘಟನೆಯ ಸಂಘಟನಾ ಕಾರ್ಯದರ್ಶಿ ಡಾ.ಬಿ.ಸಿ.ಪೃಥ್ವಿ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಮ್ಮೇಳನದಲ್ಲಿ ರಾಜ್ಯಾದ್ಯಂತ 2000ಕ್ಕೂ ಹೆಚ್ಚು ವೈದ್ಯರು ನೋಂದಾಯಿಸಿದ್ದು, ಮೂರು ದಿನಗಳ ಕಾಲ ಭಾಗವಹಿಸಲಿದ್ದಾರೆ. ಸಮ್ಮೇಳನದಲ್ಲಿ ನೂತನ ಆವಿಷ್ಕಾರ, ಚಿಕಿತ್ಸೆ, ಇತ್ಯಾದಿಗಳ ಬಗ್ಗೆ ಉಪನ್ಯಾಸ–ಚರ್ಚೆ, ಕಾರ್ಯಗಾರಗಳು ನಡೆಯಲಿವೆ. ಮೇ 8ರಂದು ಬೆಳಿಗ್ಗೆ 9ರಿಂದ 11ರವರೆಗೆ ಶಿವಮೊಗ್ಗದ ಜನತೆಗೆ ಮತ್ತು ವಿದ್ಯಾರ್ಥಿಗಳಿಗೆ ತುರ್ತು ಜೀವರಕ್ಷಕ ತರಬೇತಿ ಮತ್ತು ಕಾರ್ಯಾಗಾರವನ್ನು ಸಿಮ್ಸ್‌ನ ಕಮ್ಯುನಿಟಿ ಮೆಡಿಸನ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಸಮ್ಮೇಳನ ಸಂಘಟನಾ ಸಮಿತಿಯ ಅಧ್ಯಕ್ಷ ಡಾ.ಎಸ್.ಬಿ.ಹೆಗಡೆ ಮಾತನಾಡಿ, 22 ವರ್ಷದ ನಂತರ ಸಮ್ಮೇಳನ ನಡೆಯುತ್ತಿದ್ದು, ಈ ಸಮ್ಮೇಳನದಲ್ಲಿ ರಾಜ್ಯದ ಎಲ್ಲೆಡೆಯಿಂದ ತಜ್ಞ ವೈದ್ಯರುಗಳು ಭಾಗವಹಿಸಿ ಸಾವಿರಕ್ಕೂ ಹೆಚ್ಚು ಸಂಶೋಧನ ಪ್ರಬಂಧಗಳನ್ನು ಪ್ರಸ್ತುತ ಪಡಿಸಲಿದ್ದಾರೆ. ಹೈದರಾಬಾದ್‌ನಿಂದ ಡಾ.ನಾಗೇಶ್ವರ ರೆಡ್ಡಿ, ದೆಹಲಿಯಿಂದ ಡಾ.ರಮಣಪುರಿ, ಚೆನ್ನೈನಿಂದ ಡಾ.ಸುರೇಶ್ ಕುಮಾರ್, ದುಬೈನಿಂದ ಡಾ.ಧನರಾಜ್ ಸೇರಿದಂತೆ ದೇಶ–ವಿದೇಶಗಳಿಂದ ನುರಿತ ವೈದ್ಯರು ಉಪನ್ಯಾಸ ನೀಡಲು ಆಗಮಿಸಲಿದ್ದಾರೆ ಎಂದರು.

ಮೇ 8ರಂದು ಸಂಜೆ 5 ಗಂಟೆಗೆ ಸಮಾವೇಶದ ಉದ್ಘಾಟನೆಯನ್ನು ಖ್ಯಾತ ಹೃದ್ರೋಗ ತಜ್ಞ ವೈದ್ಯ, ಪದ್ಮಶ್ರೀ ಡಾ.ಸಿ.ಎನ್ ಮಂಜುನಾಥ್ ರವರು ನೆರವೇರಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಡಾ.ಮಹಾಲಿಂಗಪ್ಪ ಬಿ., ಡಾ.ಜಿ.ನರಸಿಮುಲು, ಡಾ.ಜ್ಯೋತಿರ್ಮೋಯ್ ಪಾಲ್, ಡಾ.ನಂದಿನಿ ಚಟರ್ಜಿ, ಡಾ.ವಿರೂಪಾಕ್ಷಪ್ಪ ವಿ., ಡಾ. ನಾಗೇಂದ್ರ ಎಸ್. ಇವರುಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಖಜಾಂಚಿ ಡಾ.ಮಹೇಶ್ ಮೂರ್ತಿ ಬಿ.ಆರ್, ಡಾ.ಶ್ರೀಕಾಂತ್ ಎನ್. ಹೆಗಡೆ, ಡಾ.ಕೆ.ಆರ್. ರವೀಶ್, ಡಾ.ಎಸ್.ಪರಮೇಶ್ವರ್, ಡಾ. ಅರವಿಂದ್ ಸಿ.ಎಲ್, ಡಾ.ಪ್ರವೀಣ್ ದೇವರಭಾವಿ, ಡಾ.ರತ್ನಾಕರ್, ಡಾ.ಪಿ.ಕೆ. ಪೈ, ಡಾ.ಡಿ.ಜಿ. ಶಿವಕುಮಾರ್, ಡಾ.ಈಶ್ವರಪ್ಪ, ಡಾ.ರಮ್ಯ ಭಟ್ ಮತ್ತಿತರ ತಜ್ಞ ವೈದ್ಯರು ಹಾಜರಿದ್ದರು.



- 2000ಕ್ಕೂ ಹೆಚ್ಚು ವೈದ್ಯರು ನೋಂದಾವಣೆ
- ಮೊದಲ ದಿನ ಶಿವಮೊಗ್ಗದ ಜನತೆಗೆ ಮತ್ತು ವಿದ್ಯಾರ್ಥಿಗಳಿಗೆ ತುರ್ತು ಜೀವರಕ್ಷಕ ತರಬೇತಿ, ಕಾರ್ಯಾಗಾರ
- 1000ಕ್ಕೂ ಹೆಚ್ಚು ತಜ್ಞ ವೈದ್ಯರಿಂದ ಸಂಶೋಧನಾ ಪ್ರಬಂಧಗಳ ಪ್ರಸ್ತುತಿ
- ನುರಿತ ವೈದ್ಯರಿಂದ ಉಪನ್ಯಾಸ

ಸಚಿವ ಗುಂಡೂರಾವ್, ಮಧು ಸಹಕಾರದಿಂದ ಸುಸಜ್ಜಿತ ಸಭಾಂಗಣ ನಿರ್ಮಾಣ

ಸಿಮ್ಸ್ ಸಂಸ್ಥೆಯಲ್ಲಿ 22 ಸ್ನಾತಕೋತ್ತರ ವಿಷಯಗಳಿದ್ದು ಇನ್ನೂ ಮೂರು ವಿಷಯಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಹಾಲಿ 102 ಸ್ನಾತಕೋತ್ತರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. 150 ವೈದ್ಯರೇ ಬೋಧಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಸಂಸ್ಥೆಗೆ ಒಂದು ಸುಸಜ್ಜಿತವಾದ ಸಭಾಂಗಣ ಅವಶ್ಯಕತೆ ಇದೆ. ಕಳೆದ 5 ವರ್ಷಗಳಿಂದ ಅದರ ಕಾಮಗಾರಿ ನಡೆಯುತ್ತಿತ್ತು. ಟೆಂಡರ್‌ದಾರರ ಸಮಸ್ಯೆಯಿಂದಾಗಿ ನಿರ್ಮಾಣಕಾರ್ಯ ಕುಂಠಿತವಾಗಿತ್ತು.
ಸಚಿವ ದಿನೇಶ್ ಗುಂಡೂರಾವ್, ಉಸ್ತುವಾರಿ ಸಚಿವ ಮಧುಬಂಗಾರಪ್ಪ ಅವರೊಡನೆ ಸಮಾಲೋಚಿಸಿದ ಪರಿಣಾಮ ಇಂದು ಸಭಾಂಗಣ ರಾಷ್ಟ್ರಮಟ್ಟದ ಸಮ್ಮೇಳನಕ್ಕೆ ತೆರೆದುಕೊಂಡಿದೆ. ಇದು ಸಂಸ್ಥೆಯ ಹೆಮ್ಮೆಯ ವಿಷಯವಾಗಿದೆ.
ಸಮ್ಮೇಳನದ ಯಶಸ್ಸಿಗೆ 1 ವರ್ಷದ ಹಿಂದೆ ವಿವಿಧ ಸಮಿತಿಗಳನ್ನು ರಚಿಸಲಾಗಿತ್ತು ಎಂದು ಸಿಮ್ಸ್ ನಿರ್ದೇಶಕ ಡಾ.ವಿರೂಪಾಕ್ಷಪ್ಪ ಹೇಳಿದರು.

ಕನ್ನಡದ ಮನಸ್ಸು ಕಟ್ಟಲು ಕಸಾಪ ಸೇವೆ

ಶಾಸಕ ಚನ್ನಬಸಪ್ಪ ಶ್ಲಾಘನೆ | ಕಸಾಪ 112ನೇ ಸಂಸ್ಥಾಪನಾ ದಿನ



ಶಿವಮೊಗ್ಗದ ನಗರದ ಸಾಹಿತ್ಯ ಗ್ರಾಮದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್‌ಮಿರ್ಜಾ ಇಸ್ಮಾಯಿಲ್, ಸರ್‌ಎಂ. ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯನ್ನು ಕಟ್ಟುವಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅಪ್ರತಿಮ ಸೇವೆ ಸಲ್ಲಿಸುತ್ತಿದೆ ಎಂದು ಶಾಸಕ ಎಸ್.ಎನ್.ಚನ್ನಬಸಪ್ಪ ಶ್ಲಾಘಿಸಿದರು.

ನಗರದಲ್ಲಿ ಮಂಗಳವಾರ ನಗರದ ಸಾಹಿತ್ಯ ಗ್ರಾಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಏರ್ಪಡಿಸಿದ್ದ ಕಸಾಪ 112ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಕಸಾಪ ಸಂಸ್ಥಾಪಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್‌ಮಿರ್ಜಾ ಇಸ್ಮಾಯಿಲ್, ಸರ್‌ಎಂ. ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಉದ್ಘಾಟಿಸಿ ಮಾತನಾಡಿದ ಅವರು, ಪರಿಷತ್ತು ಕೇವಲ ಸಾಹಿತ್ಯಕ್ಕೆ ಸೀಮಿತವಾಗದೆ, ಕನ್ನಡದ ಅಸ್ಮಿತೆಯನ್ನು ಕಾಪಾಡುವ ಶಕ್ತಿಯಾಗಿ ಬೆಳೆದು ಬಂದಿದೆ. ಜಿಲ್ಲೆಯಲ್ಲಿ ಮನೆ ಮನೆಗೆ ಸಾಹಿತ್ಯ ತಲುಪಿಸುವ ಕೆಲಸ ಕಸಾಪ ವತಿಯಿಂದ ನಡೆದಿದೆ. ಇಂತಹ ಸಾಂಸ್ಕೃತಿಕ ಸಂಸ್ಥೆಗಳ ಬಲವರ್ಧನೆಗೆ ನಮ್ಮ ಸಂಪೂರ್ಣ ಸಹಕಾರ ಸದಾ ಇರಲಿದೆ ಎಂದು ಹೇಳಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಡಿ. ಮಂಜುನಾಥ ಮಾತನಾಡಿ, ಕಸಾಪ ಸ್ಥಾಪನೆಯ ಹಿಂದಿನ ಆಶಯಗಳನ್ನು ಮರೆಯಬಾರದು. ನಾಲ್ವಡಿ ಕೃಷ್ಣರಾಜ ಒಡೆಯರ್‌ಅವರ ರಾಜಾಶ್ರಯದಿಂದ ಆರಂಭವಾದ ಸಂಸ್ಥೆ ಇಂದು ಹೋಬಳಿಯಿಂದ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆದು ನಿಂತಿದೆ ಎಂದರು.

ಮಾಜಿ ಶಾಸಕ ಕೆ. ಬಿ. ಪ್ರಸನ್ನಕುಮಾರ್,ಡಿ.ವಿ.ಎಸ್. ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎಸ್.ಪಿ.ದಿನೇಶ್ ಮಾತನಾಡಿದರು. ಇದೇ ವೇಳೆ ಕಸಾಪ ಹಿರಿಯ ಸದಸ್ಯರಾದ ಹೊಸತೋಟ ಸೂರ್ಯನಾರಾಯಣ, ಶಾಂತಾ ಆನಂದ, ಡಾ.ಕೃಷ್ಣ ಎಸ್. ಭಟ್, ಬಿ.ಡಿ.ಸಾವಕ್ಕನವರ್, ಮಧುಗಣಪತಿರಾವ್ ಮಡೆನೂರು ಅವರನ್ನು ಅಭಿನಂದಿಸಲಾಯಿತು.

ಗಾಯಕರಾದ ನಳಿನಾಕ್ಷಿ, ಚಂದ್ರಶೇಖರ್, ಷರೀಫ್, ಡಾ. ನೇತ್ರಾವತಿ ಮತ್ತು ತಂಡದವರು ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ಡಾ.ಜಿ.ಆರ್. ಲವ, ಗಾಯತ್ರಿ ಸುರೇಂದ್ರ, ಬಾಲರಾಜ್ ಚುರ್ಚುಗುಂಡಿ ಕಥೆ ಹೇಳಿದರು. ಕವಿಗಳಾದ ಊರ್ಮಿಳಾ ರಾವ್, ಪಿ.ಕೆ. ಸತೀಶ್, ವಾಗೀಶ್ ಆರಾಧ್ಯ ಮಠ, ಶಶಿಕಲಾ, ಎಸ್.ಕೆ. ಗಾಯತ್ರಿ, ಡಾ.ನೇತ್ರಾವತಿ, ಡಾ.ಕೃಷ್ಣ ಎಸ್. ಭಟ್, ಮಧುಗಣಪತಿರಾವ್ ಮಡೆನೂರು ಕವನ ವಾಚಿಸಿದರು. ನಳಿನಾಕ್ಷಿ ಮತ್ತು ತಂಡದವರು ನಾಡಗೀತೆ ಹಾಡಿದರು. ಎಂ.ನವೀನ್ ಕುಮಾರ್‌ಸ್ವಾಗತಿಸಿ, ಎಂ.ಎಂ.ಸ್ವಾಮಿ ವಂದಿಸಿ, ಕೆ.ಎಸ್. ಮಂಜಪ್ಪ ನಿರೂಪಿಸಿದರು. ಹಿರಿಯ ಸದಸ್ಯರಾಗಿದ್ದ ಎಚ್. ಎಸ್. ಶಂಕರ್‌ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರ ಬಂಧನ

ಶಿವಮೊಗ್ಗ: ಕಾರಿನಲ್ಲಿ ಗಾಂಜಾ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದ ಇಬ್ಬರ ಮೇಲೆ ಪೊಲೀಸರು ದಾಳಿ ನಡೆಸಿದ ಘಟನೆ ರಾಜೀವ್‌ಗಾಂಧಿ ಬಡಾವಣೆಯ ಕಂಟ್ರಿ ಕ್ಲಬ್ ರಸ್ತೆಯಲ್ಲಿ ನಡೆದಿದೆ. ಪಿ.ಅಶೋಕ (28) ಮತ್ತು ರಾಕೇಶ್ (20) ಬಂಧಿತ ಆರೋಪಿಗಳು. ಶಿವಮೊಗ್ಗ ಡಿವೈಎಸ್‌ಪಿ ಬಾಬು ಆಂಜನಪ್ಪ ಅವರು ಗಸ್ತು ಕರ್ತವ್ಯದಲ್ಲಿದ್ದಾಗ ಬಂದ ಖಚಿತ ಮಾಹಿತಿಯ ಮೇರೆಗೆ ದಾಳಿ ನಡೆಸಲಾಗಿದೆ. ಆರೋಪಿಗಳು ಮಹಾವೀರ ಗೋಶಾಲೆ ಬಳಿ ಗ್ರೇ ಬಣ್ಣದ ನಿಸಾನ್ ಸನ್ನಿ ಕಾರಿನಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದರು. ಪೊಲೀಸರ ವಾಹನವನ್ನು ಕಂಡ ಆರೋಪಿಗಳು ಕಾರಿನಲ್ಲಿ ಪರಾರಿಯಾಗಲು ಯತ್ನಿಸಿದರು. ಬೆನ್ನಟ್ಟಿದ ಪೊಲೀಸರು ಅವರನ್ನು ಅಡ್ಡಗಟ್ಟಿ ವಶಕ್ಕೆ ಪಡೆದರು. ಕಾರಿನ ಡಿಕ್ಕಿಯನ್ನು ಪರಿಶೀಲಿಸಿದಾಗ ಬಿಳಿ ಚೀಲದಲ್ಲಿ ಸುಮಾರು 1067 ಗ್ರಾಂ ಗಾಂಜಾ ಪತ್ತೆಯಾಗಿದೆ. ಇದರ ಮೌಲ್ಯ ಸುಮಾರು ಒಂದು ಲಕ್ಷ ಎಂದು ಅಂದಾಜಿಸಲಾಗಿದೆ. ಗಾಂಜಾ ಪ್ಯಾಕ್ ಮಾಡಲು ಇಟ್ಟುಕೊಂಡಿದ್ದ 18 ಸಣ್ಣ ಜಿಪ್ ಲಾಕ್ ಕವರ್‌ಗಳು, ಎಲೆಕ್ಟ್ರಾನಿಕ್ ತೂಕದ ಯಂತ್ರ ಹಾಗೂ 3290 ರು. ನಗದು ವಶಕ್ಕೆ ಪಡೆಯಲಾಗಿದೆ. ಆರೋಪಿಗಳ ವಿರುದ್ಧ ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮಾಲೋಚನೆ ಶಾಸಕ ಚನ್ನಬಸಪ್ಪ ಆಕ್ರೋಶ | ಶಿಕ್ಷಕರ ಮುಷ್ಕರ ಸ್ಥಳಕ್ಕೆ ಭೇಟಿ

ನಾನ್ ಪ್ರಾಕ್ಟೀಸಿಂಗ್ ಭತ್ಯೆ ತಡೆಗೆ ಕಿಡಿ



ಶಿವಮೊಗ್ಗದಲ್ಲಿ ಶಿಕ್ಷಕರ ಸಂಘದ ಅನಿರ್ದಿಷ್ಟಾವಧಿ ಮುಷ್ಕರ ಸ್ಥಳಕ್ಕೆ ಶಾಸಕ ಚನ್ನಬಸಪ್ಪ ಭೇಟಿ ನೀಡಿದರು.

ಶಿವಮೊಗ್ಗ: ಕರ್ನಾಟಕ ಪಶು ವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ನೌಕರರಿಗೆ ನೀಡಲಾಗುತ್ತಿದ್ದ ನಾನ್ ಪ್ರಾಕ್ಟಿಸಿಂಗ್ ಭತ್ಯೆಯನ್ನು (ಎನ್‌ಪಿಎ) ನಿಲ್ಲಿಸಿರುವ ಸರ್ಕಾರದ ನಡೆ ಖಂಡನೀಯವಾಗಿದ್ದು, ಈ ಆದೇಶವನ್ನು ತಕ್ಷಣ ಹಿಂಪಡೆಯಬೇಕು ಎಂದು ಶಾಸಕ ಎಸ್.ಎನ್. ಚನ್ನಬಸಪ್ಪ ಆಗ್ರಹಿಸಿದರು.

ನಗರದಲ್ಲಿ ಮಂಗಳವಾರ ಶಿಕ್ಷಕರ ಸಂಘದ ವತಿಯಿಂದ ನಡೆಯುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರ ಸ್ಥಳಕ್ಕೆ ಭೇಟಿ ನೀಡಿದ ಅವರು, ಪ್ರತಿಭಟನಾಕಾರರೊಂದಿಗೆ ಸಮಾಲೋಚನೆ ನಡೆಸಿದರು.

ಪಶು ವೈದ್ಯಕೀಯ ಮತ್ತು ಮೀನುಗಾರಿಕೆ ವಿಜ್ಞಾನಿಗಳು ಎದುರಿಸುತ್ತಿರುವ ತಾಂತ್ರಿಕ ಮತ್ತು ಆರ್ಥಿಕ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದ ಅವರು, ವಿಜ್ಞಾನಿಗಳು ಮತ್ತು ಶಿಕ್ಷಕರು ಸಮಾಜದ ಬೆನ್ನೆಲುಬು. ಅವರ ಭತ್ಯೆಗಳನ್ನು ಕಡಿತಗೊಳಿಸುವುದು ಅವರ ವೃತ್ತಿ ನಿಷ್ಠೆಗೆ ಮಾಡುವ ಅವಮಾನ. ಸ್ಥಗಿತಗೊಂಡಿರುವ ಎನ್‌ಪಿಎ ಅನ್ನು ಕೂಡಲೇ ಬಿಡುಗಡೆ ಮಾಡಲು ಮತ್ತು ಶಿಕ್ಷಕರ ಹಿತರಕ್ಷಣೆಗಾಗಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಸಚಿವರಿಗೆ ಹಾಗೂ ಅಧಿಕಾರಿಗಳಿಗೆ ಒತ್ತಾಯಿಸಲಾಗುವುದು ಎಂದರು.

ಮುಷ್ಕರದಲ್ಲಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಶಿಕ್ಷಕರು, ವಿಜ್ಞಾನಿಗಳು ಹಾಗೂ ಸಂಘದ ಪದಾಧಿಕಾರಿಗಳು ಪಾಲ್ಗೊಂಡಿದ್ದರು.